
ಕಲ್ಯಾಣ ಕಿರಣ



1992

ನವೆಂಬರ್

ಕನ್ನಡ ರಾಜ್ಯೋತ್ಸವ

ಬೆಲೆ : 3 ರೂ.

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ

ಮಾಸಪತ್ರಿಕೆ, ನವಂಬರ್-1992, ಬಿಡಿಸಂಚಿಕೆ 3-00 ರೂ.

ಸಂಪುಟ : 21 ಸಂಚಿಕೆ : 5 ಬಸವ ಶಕೆ : 887
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಮುಖ ಪುಟ : ನವಂಬರ್-1, ಕನ್ನಡ ರಾಜ್ಯೋತ್ಸವ

ಹೊದ್ದಿಕೆಯ 4 ನೇ ಪುಟ : ಅಗಲಿದ ಮೂವರು ಗಣ್ಯರಿಗೆ ಶ್ರದ್ಧಾಂಜಲಿ

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 325335.

ದಾನಿಗಳ ಗಮನಕ್ಕೆ

ಬಸವ ಧರ್ಮ ಪೀಠದ ಸಹೋದರಿ ಸಂಸ್ಥೆಯಾದ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80 G ರಿಯಾಯಿತಿ ಸೌಲಭ್ಯ ಹೊಂದಿದ್ದು ಇದು 31-3-1992 ಕ್ಕೆ ಕೊನೆಗೊಂಡಿದ್ದಿತು. ನವೀಕರಣಕ್ಕೆ ಅರ್ಜಿ ಹಾಕಿದ್ದು 1-4-1992 ರಿಂದ ನವೀಕರಣಗೊಂಡ ಆಜ್ಞೆ ಬಂದಿದೆ. ಆದ್ದರಿಂದ 80 G ರಿಯಾಯಿತಿ ಬೇಕೆಂದು ಇಷ್ಟಪಟ್ಟ, 1-4-1992 ರ ನಂತರ ದೇಣಿಗೆ ಕೊಟ್ಟದಾನಿಗಳು ತಮ್ಮ ಕೊಡುಗೆ ಕುರಿತು ನೆನಪಿನೋಲೆ ಕಳಿಸಬೇಕು.

1. ಈಗಾಗಲೇ ರಸೀತಿ ಪಡೆದವರು ಆ ರಸೀತಿ ಕಳಿಸಿದರೆ ಆದೇಶದ ನಂಬರು ಮುದ್ರಣಗೊಂಡ ಇನ್ನೊಂದು ರಸೀತಿ ಕಳಿಸಲಾಗುವುದು.

2. ಒಂದು ವೇಳೆ ಬ. ಮ. ಚಾ. ಟ್ರಸ್ಟ್ ರಸೀತಿ ಇನ್ನೂ ಪಡೆದಿರದಿದ್ದರೆ, ಹಣ ಕೊಟ್ಟ ದಿನಾಂಕ, ಹಣದ ಮೊತ್ತ ತಿಳಿಸಿ, ಬೆಂಗಳೂರು ವಿಳಾಸಕ್ಕೆ ಪತ್ರ ಬರೆಯಬೇಕು.

ವಿಳಾಸ : ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ
2035, 2 ನೇ ಬ್ಲಾಕು, 20 ನೇ ಮೆಯಿನ್
ರಾಜಾಜಿನಗರ, ಬೆಂಗಳೂರು 560010

ಕಲ್ಯಾಣ ಕಿರಣ

ಸಂಪುಟ : 21 ಸಂಚಿಕೆ : 5 ಬಸವ ಶಕೆ : 887, ನವೆಂಬರ 1992

ಶಿವಯೋಗಿ ಸಿದ್ಧರಾಮೇಶ್ವರರ ವಾಣಿ.

ಗುರುವಿಂಗಾದಡೆಯು ಬಸವಣ್ಣನೆ ಬೇಕು
ಲಿಂಗಕ್ಕಾದಡೆಯೂ ಬಸವಣ್ಣನೆ ಬೇಕು
ಜಂಗಮಕ್ಕಾದಡೆಯೂ ಬಸವಣ್ಣನೆ ಬೇಕು
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ಬೇಕು
(ಸಿ. ವ. [illegible])

ಶರಣಾರ್ಥಿ ಶರಣಾರ್ಥಿ ಬಸವ ಬಸವಾ ಗುರುವೆ
ಗುರುವೆ ಬಸವ, ಬಸವ, ಬಸವಾ,
ಕಪಿಲಸಿದ್ಧಮಲ್ಲಿನಾಥಯ್ಯಾ
ನನ್ನಂಗ ನಿನ್ನಂಗ ಬಸವಣ್ಣಂಗರ್ಪಿತವಯ್ಯಾ (ಸಿ. ವ. [illegible])
ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯಾ
ಆತನ ಪ್ರಾಣ ನಿಮ್ಮಲ್ಲಿಪ್ಪುದು
ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಶರಣ ಬಸವಣ್ಣನ ಅನುವ ನೀವೇ ಬಲ್ಲಿರಿ.
(ಸಿ. ವ. ೯೭೦)

ಕಾಲಿಲ್ಲದವಂಗೆ ಕಾಲ ಕೊಟ್ಟೆ ಬಸವಾ
ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ!
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ
ಕಪಿಲಸಿದ್ಧಮಲ್ಲಿನಾಥಯ್ಯಾ (ಸಿ. ವ. [illegible])

ಬಸವನನು ಹೊಗಳುವರ ಬಸವನನು ನೆನೆವವರ
ಬಸವನನು ಗುರು ಚರ ಇಷ್ಟವೆನಿಪ
ಸದಮಲಜ್ಞಾನ ಪ್ರಕಾಶ ಸದ್ವರ್ತನರ
ನೆರೆಹೊರೆಯೊಳಗೆನ್ನನಿರಿಸಯ್ಯಾ ಗುರುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ (ಸಿ. ವ. [illegible])

Digitalized by e-Sahithya Documentation Forum
Sponsored by Sarayu Foundation Trust

ಅಭಿಪ್ರಾಯ-ನಿರ್ಧಾರ

೧. ಗುರುಪೂಜೆ —ಮಾತಾಜಿ

ಮಾಡುವ ಸದಾಚಾರಕ್ಕೆ ಮೊದಲನೆಯ (ಲಿಂಗ) ಪೂಜೆಯೇ ಗುರು ಪೂಜೆ
ಮಾಡುವ ಸದಾಚಾರಕ್ಕೆ ಎರಡನೆಯ (ಲಿಂಗ) ಪೂಜೆಯೇ ಲಿಂಗ ಪೂಜೆ
ಮಾಡುವ ಸದಾಚಾರಕ್ಕೆ ಮೂರನೆಯ (ಲಿಂಗ) ಪೂಜೆಯೇ ಜಂಗಮ ಪೂಜೆ
ಮಾಡುವ ಸದಾಚಾರಕ್ಕೆ ಮೂರು ಪೂಜೆ
ಈ ಪೂಜೆ ಅನಂತ ಜನ್ಮ ದುರಿತ ಧ್ವಂಸ ನೋಡಾ
ಕೂಡಲ ಚನ್ನ ಸಂಗಮದೇವ ಸಾಕ್ಷಿಯಾಗಿ. (ಚ. ಬ. ವ. 126)

ಚನ್ನ ಬಸವಣ್ಣನವರ ವಚನದ ಪ್ರಕಾರ ಸದಾಚಾರಿಯಾದ ಶರಣನು ಗುರು-ಲಿಂಗ-ಜಂಗಮ ಪೂಜೆಗಳನ್ನು ಮಾಡಬೇಕು. ಗುರುಪೂಜೆ ಎಂಬಲ್ಲಿ 'ಬಸವ ಗುರು ಪೂಜೆ' ಎಂದು ಭಾವಿಸಿ, ದೀಕ್ಷಾಗುರು, ಶಿಕ್ಷಾ ಗುರುಗಳನ್ನು 'ಜಂಗಮ' ವರ್ಗದಲ್ಲಿ ಸೇರಿಸಬೇಕು. ಆಗ ಗುರು-ಲಿಂಗ-ಜಂಗಮ ಎಂಬ ತ್ರಿತತ್ತ್ವಗಳು ಸಂಪೂರ್ಣವಾಗಿ ಕ್ರೈಸ್ತ ಮತ್ತು ಬೌದ್ಧ ಧರ್ಮದ ತ್ರಿತತ್ತ್ವ (Trinity) ಗಳನ್ನು ಹೋಲುತ್ತವೆ.

ಕ್ರೈಸ್ತ ಧರ್ಮ :	ದೇವರ ಮಗ (ಏಸುಕ್ರಿಸ್ತ) – ದೇವರು–ಪವಿತ್ರಾತ್ಮರು
ಬೌದ್ಧ ಧರ್ಮ :	ಬುದ್ಧ – ಧರ್ಮ – ಸಂಘ
ಲಿಂಗಾಯತ ಧರ್ಮ :	ಬಸವಣ್ಣ–ಇಷ್ಟಲಿಂಗ – ಜಂಗಮ.

ಲಿಂಗಾಯತ ಧರ್ಮದಲ್ಲಿ ಗಣಲಾಂಛನವಾದ, ದೇವರ ಕುರುಹಾದ ಇಷ್ಟ-ಲಿಂಗವು ಅತ್ಯಂತ ಮಹತ್ವದ ಉಪಾಸ್ಯವಸ್ತು. ಆದ್ದರಿಂದ ನಿತ್ಯ ಪೂಜೆ ಮಾಡು–ವಾಗ ಮೊದಲು ಪ್ರಥಮ ಗಣಾಧೀಶ ಬಸವ ಗುರುವಿನ ಪೂಜೆ ಮಾಡಿ ಇಷ್ಟಲಿಂಗಾರ್ಚನೆ ಮಾಡುವುದು ಸೂಕ್ತವೋ ? ಅಥವಾ ಇಷ್ಟಲಿಂಗಾರ್ಚನೆ ಪೂರೈಸಿ ಬಸವ ಗುರುವಿನ ಪೂಜೆ ಮಾಡುವುದು ಸೂಕ್ತವೋ ?

ಈ ಬಗ್ಗೆ ಕಲ್ಯಾಣ ಕಿರಣದ ಓದುಗರಿಗೆ ಚಿಂತನೆಗಾಗಿ ಸಾಮಗ್ರಿ ನೀಡಲಾ-ದ್ದಿತು. ಅಸಂಖ್ಯಾತರು ತಮ್ಮ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಶಿಬಿರದಲ್ಲಿಯೂ ಈ ಬಗ್ಗೆ ಚರ್ಚೆಯಾಯಿತು. ನೂರಕ್ಕೆ 99 ಜನರು ಮೊದಲು ಬಸವ ಗುರು ಪೂಜೆ ಮಾಡಿ, ನಂತರ ಲಿಂಗಾರ್ಚನೆ ಆರಂಭಿಸಬೇಕೆಂದು ಅಭಿಪ್ರಾಯಪಟ್ಟರು.

ಕೇವಲ ಒಬ್ಬರು ಮಾತ್ರ ಇಷ್ಟಲಿಂಗದಲ್ಲಿಯೇ ಗುರು-ಜಂಗಮ ಸಂಬಂಧವನ್ನು ಕಲ್ಪಿಸಿಕೊಂಡು ಇಷ್ಟಲಿಂಗವೊಂದನ್ನೆ ಪೂಜಿಸ ಬೇಕೆಂದು ಸೂಚಿಸಿದ್ದರೆ, ಮತ್ತೊಬ್ಬ ಶರಣೆಯರು ಸತಿಪತಿಗಳೊಂದಾಗಿ ಭಕ್ತಿ ಮಾಡಬೇಕಾದ್ದರಿಂದ, ಮೊದಲು ಲಿಂಗ-

ಪೂಜೆಯಾದರೆ ಆಗ ಲಿಂಗಪತಿ ಸಹಿತವಾಗಿ ಶರಣಸತಿ ಅಪ್ಪ ಬಸವಣ್ಣನವರನ್ನು ಪೂಜಿಸಿದಂತಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹೆಚ್ಚಿನ ಜನರು ಧರ್ಮ ಪಥವನ್ನು ತೋರಿದ ಗುರುವಿನೊಡನೆ ದೇವನ ಅಡಿಗೆ ಹೋಗಬೇಕೆಂದು, ಅದಕ್ಕಾಗಿ ಆರಂಭದಲ್ಲಿಯೇ ಬಸವ ಗುರುಪೂಜೆ ಮಾಡಬೇಕೆಂದು ಸೂಚಿಸಿದ್ದಾರೆ.

೧. ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯ
ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯ ಎಂಬ ಶ್ರೀ ಸಿದ್ಧರಾಮೇಶ್ವರರ ಆದೇಶದಂತೆ ಧರ್ಮಗುರು ಪೂಜೆಯನ್ನು ಮಾಡಿಯೇ ದೇವಪೂಜೆ ಮಾಡುವುದು ಶ್ರೇಯಸ್ಕರವೆನಿಸುತ್ತದೆ.

೨. ಎರಡನೆಯದಾಗಿ, ಸಾಂಪ್ರದಾಯಿಕ ಹಿಂದುಗಳು ಆರಂಭದಲ್ಲಿ, ಪ್ರಥಮತಃ ಗಣಪತಿ ಪೂಜೆಯನ್ನು ಮಾಡುವ ಪರಿಪಾಠವಿದ್ದು, ಲಿಂಗವಂತ ಧರ್ಮಿಯರಿಗೆ ಗಣಪತಿ ಇತ್ಯಾದಿ ಪೂಜೆ ನಿಷೇಧವಿದ್ದ ಕಾರಣ, ಧರ್ಮಗುರು ಪ್ರಮಥ ಗಣಾಧೀಶ ಬಸವಣ್ಣನವರ ಪೂಜೆಯೇ ಸೂಕ್ತವಾಗಿರುತ್ತದೆ.

ಆದ್ದರಿಂದ ಸ್ನಾನಮಾಡಿ, ಮಡಿಯುಟ್ಟು ಬರುತ್ತಲೇ ಆಸನ ಸ್ವೀಕಾರಮಾಡಿ, ಭಸ್ಮಧಾರಣೆ-ರುದ್ರಾಕ್ಷಿ ಧಾರಣೆ ಮಾಡಿಕೊಂಡು ಗುರು ಬಸವಣ್ಣನವರ ಭಾವಚಿತ್ರ-ವನ್ನು ಪೂಜಿಸಬೇಕು. ಸಂಕ್ಷಿಪ್ತವಾಗಿ ಮಾಡುವ ಈ ಪೂಜೆಯಲ್ಲಿ "ಮುಕ್ತಿದಾಯಕ" ಹಾಡು (ಅಥವಾ ಸ್ತೋತ್ರರೂಪದ ವಚನ) ಒಂದು 'ಬಸವ ಮಂಗಲ' ಇದ್ದರೆ ಸಾಕು.

ಈ ವರೆಗೂ "ಬ ಎಂಬಲ್ಲಿ ಎನ್ನ ಭವ ಹರಿಯಿತ್ತು " ಎಂಬ ವಚನ ಹಾಡಿ, ಗುರು ಸ್ಮರಣೆ ಮಾಡಲು ಸೂಚಿಸಲಾಗಿದ್ದಿತು. ಈಗ ಸಂಕ್ಷಿಪ್ತ ಅರ್ಚನೆಯನ್ನೇ ಸೂಚಿಸಲಾಗುತ್ತಿದೆ. "ಬಸವೇಶ್ವರ ಪೂಜಾವ್ರತ" ಮಾಡುವಾಗ ಮಾತ್ರ ಲಿಂಗವಂತರು ಇಷ್ಟಲಿಂಗಾರ್ಚನೆ ಪೂರೈಸಿ, ತೀರ್ಥಪ್ರಸಾದ ಪಡೆದು ನಂತರ ಪೂಜಾವ್ರತ ಮಾಡಬೇಕು. ಲಿಂಗಾಯತೇತರರು ನೇರವಾಗಿ ಪೂಜಾವ್ರತ ಮಾಡಬಹುದು.

2. ತ್ರಿಕಾಲ ಅರ್ಚನೆ :

ಲಿಂಗಮೂರ್ತಿಯನು ನಿತ್ಯವೂ
ಮೂರು ಬಾರಿ ತಪ್ಪದೆ ಅರ್ಚಿಸುವುದು ಉತ್ತಮ
ಎರಡು ವೇಳೆ ಅರ್ಚಿಸುವುದು ಮಧ್ಯಮ
ಒಂದು ಸಲ ಪೂಜಿಸುವುದು ಕನಿಷ್ಟ
ಈ ತ್ರಿವಿಧವನರಿಯದೆ ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿದಡೆ
ಮುಕ್ತಿಯನೀವನೆ ನಮ್ಮ ಕೂಡಲ ಚನ್ನ ಸಂಗಮದೇವ? —ಚ.ಬ.ವ. 205

Digitalized by e-Sahithya Documentation Forum
Sponsored by Sarayu Foundation Trust

ಇಷ್ಟಲಿಂಗವನ್ನು ಮೂರು ಬಾರಿ ಅರ್ಚಿಸುವುದು ಉತ್ತಮ, ಎರಡು ಬಾರಿ ಅರ್ಚಿಸುವುದು ಮಧ್ಯಮ, ಒಂದು ಬಾರಿ ಅರ್ಚಿಸುವುದು ಕನಿಷ್ಟ ಎಂದು ಚನ್ನ ಬಸವಣ್ಣನವರು ಅಭಿಪ್ರಾಯಪಡುತ್ತಾರೆ. ಇಸ್ಲಾಂ ಧರ್ಮದಲ್ಲಿ ದಿನಕ್ಕೆ 5 ಬಾರಿ ನಮಾಜ್ ಮಾಡುವ ನೇಮವಿದ್ದಂತೆ ಈ ತ್ರಿಕಾಲ ಲಿಂಗಾರ್ಚನೆ. ಇಂದಿನ ಕಾಲಮಾನಕ್ಕೆ ಇದು ಸಾಧ್ಯವೆ ? ಈ ನೇಮವನ್ನು ಕೆಲವರಿಗೇ ಮೀಸಲಿಡುವುದು ಸೂಕ್ತವೆ ? ಶ್ರದ್ಧಾವಂತನಿಗೆ 3, 2, 1, ಇಷ್ಟು ಸಲದಲ್ಲಿ ಎಷ್ಟು ಸಲ ಮಾಡ ಬೇಕೆಂಬ ನಿಯಮ ಇರುವುದು ಸೂಕ್ತವಾದೀತು ?

ಈ ಬಗ್ಗೆ ಸಹ ಸಾಕಷ್ಟು ಪತ್ರಗಳು ಬಂದಿವೆ. ತ್ರಿಕಾಲಾರ್ಚನೆಯು ಇಂದಿನ ಜೀವನ ವಿಧಾನದಲ್ಲಿ, ಅದೂ ಕಾಯಕ ಜೀವಿಗಳಿಗೆ ಸಾಧ್ಯವೇ ಇಲ್ಲವೆಂದು ಪ್ರತಿ ಪಾದಿಸಿದ್ದಾರೆ. ಅದಕ್ಕಾಗಿಯೇ ಮೀಸಲಾಗಿರುವ ಸ್ವಾಮಿಗಳು, ಮಠಾಧೀಶರು ಬೇಕಾ ದರೆ 3 ಬಾರಿ ಮಾಡಲಿ; ಜನರಿಗೆ ಇದು ಕಷ್ಟದಾಯಕ ಎಂದೇ ಎಲ್ಲರ ಒಕ್ಕೊರ ಲಿನ ಅಭಿಪ್ರಾಯ. ಆದ್ದರಿಂದ ಬೆಳಿಗ್ಗೆ ಕಾಯಕಕ್ಕೆ ಹೊರಡುವ ಮುನ್ನ ಸ್ನಾನ- ಪೂಜೆ ಮಾಡಿಕೊಳ್ಳಲಿ. ಪುನಃ ಕಾಯಕ ಮುಗಿಸಿ ಮನೆಗೆ ಬಂದಾಗ ಒಮ್ಮೆ ಪೂಜಿ ಸಲಿ. ಇದು ಅತ್ಯಂತ ಸೂಕ್ತ. ಇನ್ನು ತೀರಾ ಅನಿವಾರ್ಯವಿದ್ದು ಸಂಜೆ ವೇಳೆ ಆಗದಿದ್ದರೆ ಮನಸ್ಸಿನಲ್ಲೇ ದೇವರನ್ನು ಸ್ಮರಿಸಿ ಪ್ರಸಾದ ಸ್ವೀಕರಿಸಲು ಅನುಮತಿ ನೀಡಬೇಕೆಂದು ಸೂಚಿಸಿದ್ದಾರೆ.

ಈ ಸಲಹೆಗಳೆಲ್ಲವೂ ಬಹಳ ಪ್ರಾಯೋಗಿಕ, ವಾಸ್ತವಿಕವಾಗಿ ಇವೆ. ಬಸವಾದಿ ಪ್ರಮಥರು ಧರ್ಮವನ್ನು ಸಂಸ್ಥಾಪಿಸುವ ಕಾಲದಲ್ಲಿ ಜೀವನವು ಸೀಮಿತವಾಗಿರು ತ್ತಿತ್ತು. ಇಂದಿನ ಒತ್ತಡವೂ ಇರಲಿಲ್ಲ. ಅಲ್ಲದೆ ಧರ್ಮವು ಅತ್ಯಗತ್ಯವೆನಿ ಸಿತ್ತು; ಇಂಥದೊಂದು ಮೌಲ್ಯವನ್ನು ಅರ್ಥಾತ್ ಸಂಪತ್ತನ್ನು ಗುರು ಬಸವಣ್ಣನ ವರು ಕೊಟ್ಟರೆಂದೇ ಅಸಂಖ್ಯಾತರು ಹೃದಯ ತುಂಬಿ ಕೊಂಡಾಡಿದರು. ಇದನ್ನು ಪಡೆಯಲು ಯಾವ ತ್ಯಾಗಕ್ಕೂ ಸಿದ್ಧರಾದರು.

ಹೇಗೆ ಸ್ವಾತಂತ್ರ್ಯವನ್ನು ಪಡೆಯಲು ಹೋರಾಟ ಮಾಡಿದವರಿಗೆ ಸ್ವಾತಂತ್ರ್ಯ ಸಿಕ್ಕಾಗ ಅದು ಅಮೂಲ್ಯ ಎನಿಸಿತೋ ಇಂದಿನ ಪೀಳಿಗೆಗೆ ಅಂದಿನ ತ್ಯಾಗದ ಅರಿವು ಸಹಿತ ಇಲ್ಲವೋ ಹಾಗೆ ಲಿಂಗವಂತ ಧರ್ಮದಲ್ಲಿ ಹುಟ್ಟಿದ ಬಹು ಜನರ ಪಾಡೂ ಆಗಿದೆ. ಇಷ್ಟಲಿಂಗದ ಮರ್ಮವನ್ನೂ ಅರಿತಿಲ್ಲ, ಅರಿತು ಅನ್ಯರು ಬಂದು ಶ್ರದ್ಧೆ- ಯಿಂದ ಪೂಜಿಸುವುದನ್ನು ಕಂಡಾಗ, ತಾವು ನಾಚಿ ನೀರಾಗಿ ಬುದ್ಧಿ ಕಲಿಯುವ ಕಳಕಳಿ ಇಲ್ಲದೆ ಶ್ರದ್ಧಾವಂತರನ್ನೇ ವಿಡಂಬಿಸುವ ಮಟ್ಟಕ್ಕೂ ಇಳಿದಿದ್ದಾರೆ, ಇಷ್ಟಾ

ದರೂ ನಾವು ಪ್ರಯತ್ನವನ್ನು ಕೈಬಿಡದೆ ಅವರಲ್ಲಿ ಧರ್ಮ-ದೇವರ ಬಗ್ಗೆ ಆಸಕ್ತಿ ಹುಟ್ಟಿಸಬೇಕಾಗಿದೆ.

ಆದ್ದರಿಂದ ತ್ರಿಕಾಲ ಪೂಜೆ ಎಲ್ಲರಿಗೂ ಸುಲಭಸಾಧ್ಯವಲ್ಲ. ಮಧ್ಯಾಹ್ನ ಕಾಯಕದ ಸ್ಥಳಗಳಲ್ಲಿ ಇರುವುದರಿಂದ ಪೂಜೆ ಮಾಡಲು ಸರಿಯಾಗದು. ಪ್ರಸಾದ ತೆಗೆದು ಕೊಳ್ಳುವ ಮೊದಲು ಮನದಲ್ಲಿಯೇ ದೇವರನ್ನು-ಧರ್ಮಗುರುವನ್ನು ಸ್ಮರಿಸಲಿ.

ಬೆಳಿಗ್ಗೆ ಮನೆ ಬಿಡುವ ಮುನ್ನ, ಸಂಜೆ ಮನೆ ಸೇರಿದ ಮೇಲೆ ಹೀಗೆ ಎರಡು ಬಾರಿ ಲಿಂಗಾರ್ಚನೆ ಮಾಡಲಿ. ಬೆಳಗಿನ ಸ್ನಾನ ಕಡ್ಡಾಯ, ಸಂಜೆಯ ಸ್ನಾನ ಐಚ್ಛಿಕ. ಇನ್ನು ಆಪತ್ ಪ್ರಸಂಗಗಳಲ್ಲಿ ವಿಭೂತಿ ಸ್ನಾನವೇ ಸಾಕು.

ಇನ್ನು ಕೆಲವರು, ಸಂಜೆಯ ಪೂಜೆ ಕಷ್ಟಸಾಧ್ಯವಿದ್ದರೆ, ಮುಖ ತೊಳೆದು ಭಸ್ಮ- ಧಾರಣೆ ಮಾಡಿಕೊಂಡು ಮನದಲ್ಲಿ ದೇವರನ್ನು ಸ್ಮರಿಸಿ, ಇಷ್ಟಲಿಂಗವನ್ನು ಕಣ್ಣಿಗೊತ್ತಿ ಕೊಂಡು ನಮಿಸಿ, ಪ್ರಸಾದ ಸ್ವೀಕರಿಸಬಹುದು. ಆದ್ದರಿಂದ ಇಂದಿನ ಕಾಲಮಾನದ ಪ್ರ ಕಾರ, ಬೆಳಿಗ್ಗೆ--ರಾತ್ರಿ ಇಷ್ಟಲಿಂಗಾರ್ಚನೆ ಮಾಡುವುದು ಉತ್ತಮ, ಬೆಳಿಗ್ಗೆ ಒಂದು ಹೊತ್ತು ಮಾಡುವುದು ಮಧ್ಯಮ, ಕೆಲವು ಕಾಯಕಗಳವರು(ಉದಾಹರಣೆಗೆ ದೀರ್ಘ ಪ್ರಯಾಣ ಹೋಗುವ ಲಾರಿ ಚಾಲಕರು ಮುಂತಾದವರು) ನಿತ್ಯವೂ ಪೂಜಿಸಲಾಗದಿದ್ದರೂ ಅನು ಕೂಲವಾದಾಗೊಮ್ಮೆ ಅರ್ಚಿಸಿ, ದೇಹದ ಮೇಲೆ ಧರಿಸಿಕೊಂಡಿದ್ದರೆ **ಕನಿಷ್ಟ**; ಇದೇನೂ ಇಲ್ಲದೆ ಬಿಟ್ಟು ತಿರುಗುವವರು ಅಧಮ ಎಂದೇಕೆ ವರ್ಗೀಕರಿಸಬಾರದು. ಸಮಾನತೆಯ ಕುರುಹಾಗಿ, ವಿಶ್ವಾತ್ಮನ ಪ್ರತೀಕವಾಗಿ, ಜಾತಿವರ್ಣವರ್ಗ ರಹಿತ ಧರ್ಮಸಹಿತ ಸಮ ತಾವಾದಿ ಸಮಾಜವನ್ನು ಕಟ್ಟುವ ಉದ್ದೇಶದಿಂದಲೇ ರೂಪುಗೊಂಡ ಗಣಲಾಂಛನವನ್ನು ಆ ಧರ್ಮದಲ್ಲಿ ಹುಟ್ಟಿಯೂ ಧರಿಸದವರನ್ನು ಹಾಗೆ ಭಾವಿಸುವುದರಲ್ಲಿ ತಪ್ಪೇನಿದೆ ?

ಇನ್ನು, ಸ್ವಾಮಿಗಳು_ಮಠಾಧಿಪತಿಗಳು ಮುಂತಾದವರು ಅದಕ್ಕಾಗಿಯೇ ಮೀಸಲಾಗಿರುವ ಕಾರಣ ದಿನಕ್ಕೆ ಮೂರುಬಾರಿ ಪೂಜೆ ಮಾಡಲು ನಿಯಮ (ಈಗಿರು ವುದು ಹಾಗೆಯೇ) ಹಾಕಬಹುದು ಎಂದು ಕೆಲವರು ಅಭಿಪ್ರಾಯ ಪಟ್ಟಿದಾರೆ. ಈಗ ಸದ್ಯದಲ್ಲಿ ಅದೇ ಆಚರಣೆ ಇದೆ. ಇದರಲ್ಲಿಯೂ ಸುಧಾರಣೆ ಅಗತ್ಯವೇ ಎಂಬುದು ಆಲೋಚನಾರ್ಹ. ಏಕೆಂದರೆ ಅಧ್ಯಯನ, ಚಿಂತನೆ, ಬರವಣಿಗೆ, ಮುಂತಾದ ಚಟುವ ಟಿಕೆ ಇರುವವರಿಗೆ ಮೂರು ಹೊತ್ತು ಸ್ನಾನ-ಪೂಜೆ ವಿಪರೀತ ಸಮಯವನ್ನು ತಿನ್ನುವ ಕಾರಣ, ಕಷ್ಟಸಾಧ್ಯ. ಕೇವಲ ಬಿನ್ನಹ ತೀರಿಸುವ ಸ್ವಾಮಿಗಳಿಗೆ ಬೇರೆ ಯಾವ ಧ್ಯೇಯೋ ದ್ದೇಶವಿರದು, ಅವರು ದಿನಕ್ಕೆ 5 ಬಾರಿಯಾದರೂ ಸ್ನಾನ-ಪೂಜೆ ಮಾಡಬಹುದು. ಬೇರೆ ವಿಧಾಯಕ ಯೋಜನೆ ಹಾಕಿಕೊಂಡು ಕ್ರಿಯಾಶೀಲ ವ್ಯಕ್ತಿತ್ವ ಹೊಂದಿರುವವರಿಗೆ ತ್ರಿಕಾಲಾರ್ಚನೆ ಆತಂಕವೇ ಎನಿಸದಿರದು.

Digitalized by e-Sahithya Documentation Forum
Sponsored by Sarayu Foundation Trust

ಸಂಪ್ರದಾಯದಲ್ಲಿ ಊಟಕ್ಕೂ-ಪೂಜೆಗೂ ನಿಕಟ ಸಂಬಂಧ ಕಲ್ಪಿಸಿಬಿಟ್ಟಿರುವರು. ಪೂಜೆ ಆದ ವೇಲೆ ಗದ್ದುಗೆ ಮೇಲೆ ಕುಳಿತೇ ಪ್ರಸಾದ ಸ್ವೀಕರಿಸುವ ನೇಮವಿರುವುದು ರಿಂದ ಅಡಿಗೆ ಸಿದ್ಧವಾಗುವವರೆಗೂ ಸ್ನಾನ–ಪೂಜೆ ಮಾಡದೆ ಕೆಲವರು ಕಾಯುವುದನ್ನು ಕಾಣುತ್ತೇವೆ. ಮಧ್ಯಾಹ್ನ-ರಾತ್ರಿ ವೇಳೆಯಲ್ಲಿ ಇದು ಅಸಹಜವಾಗಿ ತೋರದು. ಆದರೆ ಬೆಳಗಿನ ವೇಳೆಯಲ್ಲಿ ಸ್ನಾನಪೂಜೆಯಿಲ್ಲದೆ ಅಡಿಗೆ ಸಿದ್ಧವಾಗುವವರೆಗೆ ಕಾಯುವದು ಬಹಳ ಅಸಹಜ ಎನಿಸುತ್ತದೆ ಮತ್ತು ಈ ಬಗೆಯ ಪೂಜೆ ಊಟಕ್ಕಾಗಿಯೇ ವಿನಾ ಆನಂದಕ್ಕಾಗಿ ಅಲ್ಲ ಎನಿಸುತ್ತದೆ. ಈ ಪದ್ಧತಿಯು ಧರ್ಮ ಗುರುವಿನ ಆದೇಶದ ಉಲ್ಲಂಘನೆ ಎನಿಸುತ್ತದೆ.

1. ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ, ತಪ್ಪುವುವು ಅಪ-ಮೃತ್ಯು ಕಾಲಕರ್ಮಂಗಳು
2. ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು ಹೊತ್ತು ಹೋಗದ ಮುನ್ನ ಪೂಜಿಸೋ ಲಿಂಗವ
3. ಉದಯ ಮುಖದಲ್ಲಿ ಲಿಂಗದರ್ಶನ

ಬೆಳಗಿನ 9 ರವರೆಗಿನ ಸಮಯ ಸುಪ್ರಭಾತವಷ್ಟೆ? ಆದ್ದರಿಂದ ಬೆಳಗಿನ ಜಾವದ ಪೂಜೆಯನ್ನು ಆನಂದಕ್ಕಾಗಿ ಮಾಡಬೇಕು. ಪ್ರಸಾದ ಸಿದ್ಧವಾದಾಗ ಊಟ ಮಾಡಬೇಕು. ಪೂಜೆಗೂ–ಊಟಕ್ಕೂ ಸಂಬಂಧವೇನು? ಯಾರ ಮನೆಗಾದರೂ ಹೋದಾಗ ಅವರಿಗೆ ಪೂಜಾ ವಿಧಾನ ತೋರಿಸಲಿಕ್ಕಾಗಿ ಸ್ನಾನ ಮಾಡಿ, ಪೂಜೆ ಮಾಡಿ, ನಂತರ ಪ್ರಸಾದ ಸ್ವೀಕರಿಸಬಹುದು.

ಇನ್ನು ಕೆಲವರಂತೂ ನೀರು ಕುಡಿಯಲು ಸಹ ಸ್ನಾನ ಮಾಡುವರು. ಕಾಯಿಲೆಗಳಾದಾಗ ನಿಯಮಿತವಾಗಿ ಔಷಧಿ ಸ್ವೀಕರಿಸ ಬೇಕಾದಾಗ ಅವರ ಪಾಡು ನೋಡಲಾಗದು. ಇದರಿಂದಾಗಿ ಸಾಮಾನ್ಯವಾಗಿ ಸ್ವಾಮಿಗಳಿಗೆ ಜಠರದ ಹುಣ್ಣು, ಉರಿಮೂತ್ರ, ಮೂತ್ರಪಿಂಡದಲ್ಲಿ ಹರಳುಗಟ್ಟುವಿಕೆ ಮುಂತಾದುವು ಸಾಮಾನ್ಯ ಕಾಯಿಲೆಗಳಾಗುತ್ತವೆ. ಬೆಳಗಿನ ಸ್ನಾನ-ಪೂಜೆ ಆದ ಬಳಿಕ ಬಾಯಾರಿದಾಗ ನೀರು ಕುಡಿಯುವುದರಲ್ಲಿ ತಪ್ಪೇನಿದೆ?

ಇನ್ನು ಕೆಲವರು ಮಲ ಮೂತ್ರ ವಿಸರ್ಜನೆ ಮಾಡಿದಾಗಲೆಲ್ಲ ಸ್ನಾನ ಮಾಡುವರು. ಸ್ನಾನ ಮಾಡಬೇಕಾಗುತ್ತದೆ ಎಂಬ ಸಂಕಟಕ್ಕಾಗಿ ಮೂತ್ರವಿಸರ್ಜನೆ ನಿಯಂತ್ರಿಸುವರು. ನೀರನ್ನೇ ಕುಡಿಯರು. ನಿಸರ್ಗ ಚಿಕಿತ್ಸಾವಿಧಾನವು ಅನ್ನಾಹಾರಕ್ಕಿಂತಲೂ ನೀರಿಗೆ ಹೆಚ್ಚಿನ ಮಹತ್ವಕೊಡುತ್ತದೆ. ನೀರನ್ನು ಕುಡಿಯದೇ ಬಹಳ ಕಾಯಿಲೆ ತಂದುಕೊಳ್ಳುವರು. ಪ್ರಯಾಣದಲ್ಲಿ ತೊಂದರೆಯಾಗುತ್ತದೆ ಎಂದು ಮಠಬಿಟ್ಟು ಹೊರಗೇ ಹೋಗರು.

ಹೀಗಾಗಿ ಜೀವನದ ಬಹುಪಾಲು ಸ್ನಾನ-ಊಟ-ನೀರಿಗಾಗಿಯೇ ವ್ಯಯವಾಗಿ ಉಳಿದ ಧರ್ಮದ ಮಿಶನರಿಗಳಂತೆ ಸಂಚರಿಸಲು, ಕಾರ್ಯಮಾಡಲು ಆಗದೆ ಇರುವುದನ್ನು ಕಾಣಬಹುದು.

ಇಂಥ ಎಲ್ಲ ಪ್ರಾಯೋಗಿಕ ಸಮಸ್ಯೆಗಳ ಬಗ್ಗೆ ಚಿಂತನ ಮತ್ತು ತಿದ್ದುಪಡಿ ಬದಲಾದ ಈ ಪರಿಸರದಲ್ಲಿ ಅತ್ಯಗತ್ಯವಾಗಿ ತೋರುತ್ತವಲ್ಲವೆ ? ★

ಕಲ್ಯಾಣ ಕಿರಣದ ಅನಿಯಮಿತತನ

"ಕಲ್ಯಾಣ ಕಿರಣ ಮಾಸ ಪತ್ರಿಕೆ ಬಹಳ ಅನಿಯಮಿತವಾಗಿ ಹೊರಡುತ್ತ ಓದುಗರಿಗೆ ಬೇಸರ–ಕೋಪ ಎರಡನ್ನೂ ಉಂಟು ಮಾಡುತ್ತಿದೆ. ಕಾರಣ ಹಲವಾರು.

1. ಮಾರುಕಟ್ಟೆಯಲ್ಲಿ ನ್ಯೂಸ್ ಪ್ರಿಂಟು ಪೇಪರ್ ಸಿಗುವುದು ಬಹು ದುಸ್ತರವಾಗಿದೆ. ಪೇಪರ್ ಇಲ್ಲದೆ ಕೆಲಸ ನಿಂತಿದೆ. ಡೆಮ್ಮಿ ವೈಟ್ ಪ್ರಿಂಟು ಬೆಲೆಯಂತೂ ಗಗನಕ್ಕೆ ಏರಿರುವುದರಿಂದ ಮುದ್ರಣಕ್ಕೆ ಬಳಸಲು ಆಗದೆ, ನ್ಯೂಸ್ ಪ್ರಿಂಟು ಬರುವವರೆಗೂ ಕಾಯಬೇಕಾಯಿತು.

ಮುಂದಿನ ಸಂಚಿಕೆಯಿಂದ ಸೈಜ್ ಕಮ್ಮಿ ಮಾಡಬೇಕಾಗಿದೆ, ಲಭ್ಯವಿರುವ ಪೇಪರ್‌ಗೆ ತಕ್ಕಂತೆ.

2. ಕೆಲಸದ ಒತ್ತಡದಿಂದ ಪೂಜ್ಯ ಮಾತಾಜಿಯವರಿಗೆ ಬಿ. ಪಿ. ಹೆಚ್ಚಾಗಿ ಲೇಖನಗಳನ್ನು ಬರೆಯಲು ಸಾಧ್ಯವಾಗದೇ ಹೋಯಿತು.

3. ಮಾರುಕಟ್ಟೆ ತೊಂದರೆ ಸಾಲದೆಂದು ಅಂಚೆ ಇಲಾಖೆಯವರ ಕಾಯಿದೆಯ ತೊಂದರೆಗಳೂ ಸೇರುತ್ತಿವೆ. ವಿಳಂಬವಾದರೂ ಕ್ರಮವಾಗಿ ಪತ್ರಿಕೆ ಕಳಿಸೋಣ ಎಂದು ಜುಲೈ-ಅಗಸ್ಟ್ ಸಂಚಿಕೆಯನ್ನು ಪೋಸ್ಟ್ ಮಾಡಲು ಸೆಪ್ಟಂಬರದಲ್ಲಿ ಹೋದಾಗ 15 ಪೈಸೆ ಬದಲು ಒಂದೊಂದು ಪತ್ರಿಕೆಗೆ 1 ರೂ. ಅಂಚೆ ಚೀಟಿ ಹಚ್ಚಬೇಕಾಗಿ ಬಂದಿತು. ಇದಂತೂ 5000 ರೂ ಗಳಿಗೂ ಮೀರಿದ ಹೊರೆ ಹೇರಿತು.

4. 64 ಪುಟದ ಪತ್ರಿಕೆಯನ್ನು 15 ಪೈಸೆ ಅಂಚೆ ಚೀಟಿಯಲ್ಲಿ ಕಳಿಸಬಹುದಿತ್ತು. ಈಗ ಅಷ್ಟಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪುಟಗಳ ಸಂಖ್ಯೆ ಕಡಿಮೆ ಮಾಡಬೇಕಾಗಿದೆ. ಮತ್ತು ಆಗಸ್ಟ್ ಸಂಚಿಕೆ ನಂತರ ಸೆಪ್ಟಂಬರ್–ಅಕ್ಟೋಬರ್ ತಪ್ಪಿಸಿ, ನವೆಂಬರ್ ಸಂಚಿಕೆ ಕಳಿಸಲಾಗುತ್ತಿದೆ.

ಕೆಲವು ಕಾಲ ಓದುಗರು ಸುಧಾರಿಸಿಕೊಳ್ಳಬೇಕೆಂದು ಕೋರುತ್ತೇವೆ. ಇನ್ನು ಮುಂದೆ ಹೊಸದಾಗಿ ಚಂದಾದಾರರನ್ನು, ಆಜೀವ ಸದಸ್ಯರನ್ನು ಮಾಡಿಕೊಳ್ಳಬಾರದೆಂಬ ವಿಚಾರವೂ ಪರಿಶೀಲನೆಯಲ್ಲಿದೆ. ಟ್ರಸ್ಟ್ ಕಮಿಟಿಯವರು ಸಭೆ ಸೇರಿದಾಗ ನಿರ್ಣಯ ತೆಗೆದುಕೊಳ್ಳಲಾಗುವುದು. ಕೇವಲ ದಾನಿಗಳಿಗೆ ಮಾತ್ರ ಸಂಸ್ಥೆಯ ಆಗುಹೋಗು ಪ್ರಗತಿಯ ವಿವರ ತಿಳಿಸಲು ಪತ್ರಿಕೆ ಹೊರಡಿಸುವ ಉದ್ದೇಶ ಹೊಂದಿ, ಹೊಸದಾಗಿ ಚಂದಾದಾರರನ್ನು ಮಾಡಿಕೊಳ್ಳದಿರುವುದು ಯೋಗ್ಯವೆನಿಸುತ್ತಿದೆ.

ಕಲ್ಯಾಣ ಕಿರಣದ ಲೇಖನಗಳಿಗಾಗಿ ಕಾತುರದಿಂದ ಕಾಯುವ ಓದುಗರನ್ನು ನಿರಾಶೆಪಡಿಸುವ ಅನಿವಾರ್ಯತೆ ಒದಗಿದ್ದಕ್ಕೆ ವಿಷಾದಿಸುತ್ತೇವೆ.

ಪುಟಗಳ ಸಂಖ್ಯೆಯನ್ನು ಕಮ್ಮಿ ಮಾಡಿ, ಗಾತ್ರವನ್ನು ಕಿರಿದು ಮಾಡಿದ್ದರಿಂದ ಗುಲಬರ್ಗಾದ ವಿಶ್ವಕಲ್ಯಾಣ ಪತ್ರಿಕೆಯ ಬಿ. ಮಹಾದೇವಪ್ಪನವರ ಟೀಕೆಗಳಿಗೆ ಪೂಜ್ಯ ಮಾತಾಜಿಯವರು ಕೊಟ್ಟ ಲೇಖನ ಪ್ರಕಟಿಸಿಲ್ಲ. ಉತ್ತರ ಪೂರ್ವಕ ಲೇಖನ ಬಂದೇ ಬರುತ್ತದೆಂದು ನಿರೀಕ್ಷಿಸಿದವರಿಗೆ ನಿರಾಶೆ ಮಾಡುತ್ತಿರುವುದಕ್ಕೆ ವಿಷಾದಿಸುತ್ತೇವೆ.

ಮುಂದಿನ ಸಂಚಿಕೆಯಲ್ಲಿ ತಪ್ಪದೆ ಕೊಡಲಾಗುವುದು. —ಸೋದರಿ ಕಸ್ತೂರಿ

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವಲಿಂಗಾಯನಮಃ :

ಶರಣ ಮೇಳ ಉತ್ಸವ ಸಮಿತಿ

ಮಹಾಮನೆ ಮಹಾಮಠ, ಕೂಡಲ ಸಂಗಮ-587 115

ತಾ- ಹುನಗುಂದ, ಜಿ- ಬಿಜಾಪುರ.

31-3-1992 ಕ್ಕೆ ಕೊನೆಗೊಂಡಂತೆ ಐದನೆಯ ಶರಣಮೇಳದ ಆಯ-ವ್ಯಯ ವಿವರ

ಆದಾಯ	ರೂ-ಪೈ
ಕೈಯಲ್ಲಿದ್ದ ನಗದು	4-90
ಬ್ಯಾಂಕ್ ಖಾತೆಯಲ್ಲಿ	164-75
ವಿವಿಧ ಮೂಲಗಳಿಂದ	8838-00
ದೇಣಿಗೆ ಮೂಲಕ	5,26,621-00
ಪೆಂಡಾಲ್‌ದವರ ಬಾಕಿ	13,331-00
ಒಟ್ಟು ಮೊತ್ತ	5,48,959-65

ಸೈ. ಎಂ. ಬಿ. ರಾಜ್ ಅಂಡ್ ಕೋ.

ಆಡಿಟರ್

ವ್ಯಯ	
2 ವ್ಯಾನುಗಳ ಬಾಡಿಗೆ (ಎರಡೂವರೆ ತಿಂಗಳು)	26,518-00
2 ಕಾರುಗಳ ಬಾಡಿಗೆ (ಮೂರೂವರೆ ತಿಂಗಳು)	25000-00
ಮುದ್ರಣ ಮತ್ತು ಸ್ಟೇಷನರಿ	39968-60
ಪ್ರಚಾರ ಖಾತೆಗೆ	35744-45
ವಾಹನಗಳ ನಿರ್ವಹಣೆ	29452-00
ವಿವಿಧ ಬಗೆಯ ಖರ್ಚು	29274-50
ಆಹಾರ ಧಾನ್ಯಗಳ ಖರೀದಿ	1,86311-80
ಭಾವನೆ (ಕೂಲಿ)	7,213-00
ಅಂಚೆವೆಚ್ಚ	5,930-50
ಸಾರಿಗೆ ವೆಚ್ಚ (ಕಾರ್ಯಕರ್ತರು ಮತ್ತು ಅತಿಥಿಗಳಿಗೆ)	21,185-50
ಲ (ಸಾಗಾಣಿಕೆ) ವೆಚ್ಚ	15360-00
ಕಾರ್ಯಕ್ರಮ ನಿರ್ವಹಣಾ ವೆಚ್ಚ	73418-88
ಟೆಲಿಫೋನ್ ಬಿಲ್ *	6570-00
ಹೊಸ ಪಾತ್ರೆ ಖರೀದಿ ವೆಚ್ಚ	4400.00
ತಾತ್ಕಾಲಿಕ ಉದ್ಯೋಗಿಗಳ ಸಂಬಳ	6639-00
ಬ್ಯಾಂಕ್ ಕಮೀಷನ್	147-00
ಬಸವ ಧರ್ಮ ಪೀಠದ ಹಿಂದಿನ ವರ್ಷದ ಉದ್ರಿ ಕೊಟ್ಟದ್ದು	18140-00
* ಕೂಡಲ ಸಂಗಮದ ಸ್ಟೇಟ್ ಬ್ಯಾಂಕ್‌ದಲ್ಲಿದ್ದ ಶಿಲ್ಕು	15157-75
* ಕೆನರಾ ಬ್ಯಾಂಕದಲ್ಲಿದ್ದ ಶಿಲ್ಕು	2437-02
ಕೈಯಲ್ಲಿರುವ ನಗದು	91-65
ಒಟ್ಟು ಮೊತ್ತ	5,48,959-65

* ದೂರವಾಣಿ ಬಿಲ್ ಏಪ್ರಿಲ್ ತಿಂಗಳಲ್ಲಿ ಸಹ ಬಂದಿರುತ್ತದೆ. ಅಕೌಂಟ 31-3-92 ಕ್ಕೆ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಕೂಡಲ ಸಂಗಮ ಮತ್ತು ಬೆಂಗಳೂರಿನ ಫೋನ್ ಬಿಲ್ ನಂತರ ಕಟ್ಟಲಾಗಿದೆ.

* ಪೆಂಡಾಲದವರು ಸಹ ಏಪ್ರಿಲ್‌ದಲ್ಲಿ ಹಣ ಪಡೆದಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

1993ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರು ವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ) ದ ಅಂಗವಾಗಿ ನಡೆಯಲಿದ್ದು ಆರನೆಯ ಶರಣ ಮೇಳವು 1993ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು–560010
ದೂರವಾಣಿ: 325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ–587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ : 38

ಕಾರ್ಯಕ್ರಮದ ಸ್ಥೂಲ ರೂಪುರೇಷೆ

ಮಂಗಳವಾರ ದಿ. 12–1–1993 ರಂದು—

1. ಬೆಳಿಗ್ಗೆ 10 ಗಂಟೆಗೆ ಬಸವ ಧ್ವಜಾರೋಹಣದೊಡನೆ ಮಹಾಮನೆ ಮಹಾಮಠದ ಆವರಣದಲ್ಲಿ ಕಾರ್ಯಕ್ರಮ ಆರಂಭ. ಬಸವ ಧರ್ಮ ಸಂಸತ್ ಸದಸ್ಯರ ಸಮಾವೇಶ, ಕೆಲವು ಮಹತ್ವ ಪೂರ್ಣ ಸಾಮಾಜಿಕ-ಧಾರ್ಮಿಕ-ರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಯಲಿದೆ.
2. ಜಗದ್ಗುರು ಪೀಠಾರೋಹಣದ ವಾರ್ಷಿಕೋತ್ಸವ–ಸಂಜೆ 5 ಗಂಟೆಗೆ.
   ದಿ. 13-1-1992 ರಂದು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಪೀಠಾಧಿಕಾರಿಯಾಗಿ ಗದ್ದುಗೆಯನ್ನೇರಿರುವರಷ್ಟೇ. ಈ ಪೀಠಾರೋಹಣದ ವಾರ್ಷಿಕೋತ್ಸವವು ಸಂಜೆ 5 ಗಂಟೆಗೆ ಪ್ರಾರಂಭವಾಗುವುದು. ಪೂಜ್ಯ ಮಹಾಜಗದ್ಗುರುಗಳು ಒಂದು ವರ್ಷದ ಸಾಧನೆಯನ್ನು ಕುರಿತು ವಿವರಿಸಿ, ಮುಂದಿನ ಯೋಜನೆ ಕುರಿತು ಮಾತ-ನಾಡುವರು. ಬಸವ ತತ್ತ್ವಾನುಯಾಯಿಗಳಿಗೆ ಅಮೋಘವಾದ ಸಂದೇಶವನ್ನು ನೀಡಿ ಮಾರ್ಗದರ್ಶನ ಮಾಡುವರಲ್ಲದೆ, ಬಸವ ಧರ್ಮ ಪೀಠಕ್ಕೆ ಈ ವರ್ಷದ ಅವಧಿಯಲ್ಲಿ 5000 ರೂ.ಗಳ ಮೇಲೆ ಧನ ಸಹಾಯ ಮಾಡಿದವರಿಗೆ ಸನ್ಮಾನವನ್ನು ಮಾಡುವರು.

ಬುಧವಾರ ದಿ. 13-1-1993, ಬಸವ ವನದ ಸಭಾಮಂಟಪದಲ್ಲಿ

1. ಬೆಳಿಗ್ಗೆ 9-45 ಕ್ಕೆ ಬಸವ ಧ್ವಜಾರೋಹಣ
2. ಬೆಳಿಗ್ಗೆ 10-00 ಶರಣ ಮೇಳ ಉದ್ಘಾಟನೆ
3. ಮಧ್ಯಾಹ್ನ 5 ರಿಂದ 8 ರ ವರೆಗೆ ರಾಷ್ಟ್ರೀಯ ಭಾವೈಕ್ಯತಾಗೋಷ್ಠಿ ಮತ್ತು ಮಕ್ಕಳಗೋಷ್ಠಿ.
4. ರಾತ್ರಿ 9 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ

ಗುರುವಾರ 14-1-1993 ರಂದು ಬಸವ ಕ್ರಾಂತಿ ದಿನಾಚರಣೆ ಮತ್ತು ಶಿವಯೋಗಿ ಸಿದ್ಧರಾಮೇಶ್ವರರ ಜಯಂತಿ ಆಚರಣೆ

1. ಬೆಳಿಗ್ಗೆ 8-30 ಕ್ಕೆ ಮಹಾಮನೆ ಮಹಾಮಠದಲ್ಲಿರುವ ಶ್ರೀ ಬಸವೇಶ್ವರ ಧ್ಯಾನ ಮಂಟಪದಲ್ಲಿ ವಿಶೇಷ ಪೂಜೆ ಮತ್ತು ಇಲ್ಲಿಂದ ಸಭಾಮಂಟಪದವರೆಗೆ ಪಾದಯಾತ್ರೆ, ಸಾಮೂಹಿಕ ಪಥ ಸಂಚಲನದೊಡನೆ ಆಗಮನ, ಷಟ್ಕೋನ ಬಸವ ಧ್ವಜ ಪ್ರತಿಷ್ಠಾಪನೆ.
2. ಬೆಳಿಗ್ಗೆ 10 ಗಂಟೆಗೆ ಸಮುದಾಯ ಪ್ರಾರ್ಥನೆಯ ಉದ್ಘಾಟನೆ ಮತ್ತು ಸಮುದಾಯ ಪ್ರಾರ್ಥನೆ, ನಂತರ "ಬಸವ ರಕ್ಷಾ ಬಂಧನ", ಎಳ್ಳು-ಬೆಲ್ಲಗಳ ಪರಸ್ಪರ ವಿತರಣೆ, ಪ್ರತಿಜ್ಞಾವಿಧಿ.
3. ಮಧ್ಯಾಹ್ನ 5 ರಿಂದ 9 ರ ವರೆಗೆ ತತ್ತ್ವ ಚಿಂತನಗೋಷ್ಠಿಯಲ್ಲಿ ಉಪನ್ಯಾಸ.
4. ರಾತ್ರಿ 9 ರಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಶುಕ್ರವಾರ ದಿ. 15-1-1993 ರಂದು

1. ಸುಪ್ರಭಾತದ 6 ರಿಂದ ಶ್ರೀ ಬಸವೇಶ್ವರ ಪೂಜೆ
2. ಬೆಳಿಗ್ಗೆ 7 ರಿಂದ ಸಾಮೂಹಿಕ ಇಷ್ಟಲಿಂಗ ಪೂಜೆ.
3. ಬೆಳಿಗ್ಗೆ 10 ಗಂಟೆಗೆ ಬಸವ ಜ್ಯೋತಿ ಉದ್ದೀಪನದೊಡನೆ ಮಂಗಲಾಚರಣೆ.
4. ಬೆಳಿಗ್ಗೆ 11 ರಿಂದ 2 ರ ವರೆಗೆ ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನ ಮತ್ತು ಸಮಾರೋಪ, ಶರಣರಿಗೆ ಬೀಳ್ಕೊಡುಗೆ.

Digitalized by e-Sahithya Documentation Forum
Sponsored by Sarayu Foundation Trust

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂಪ್ರೇರಣೆಯ ಕೊಡುಗೆ ನೀಡುವುದು ಅವಶ್ಯವಿದೆ.

1. ಮಹಾಪೋಷಕರು 5000 ರೂ ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

ವಿ. ಸೂ. : ಶರಣಮೇಳ ಉತ್ಸವ ಸಮಿತಿಯಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿಗಳ ಬಳಿ ಹಣ ಕೊಟ್ಟವರು, ಶರಣ ಮೇಳಕ್ಕೆ ಬರುವಾಗ ತಪ್ಪದೆ ಹಣಕೊಟ್ಟ ಪಾವತಿ ತಂದು, ಕೌಂಟರಿನಲ್ಲಿ ತೋರಿಸಿ ನಿಗದಿಪಡಿಸಿದ ಸೌಲಭ್ಯ ಪಡೆಯಬೇಕು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ. *State Bank of India, Koodala Sangama* ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ ಮತ್ತು ವೀಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ
ಧನ ದಾಸೋಹ ಮಾಡಿದವರು

(ಜುಲೈ - ಆಗಸ್ಟ್ ಸಂಚಿಕೆಯಿಂದ ಮುಂದುವರಿದಿದೆ)

ಶರಣರುಗಳಾದ :

1.	ಆರ್. ಐ. ಕಲ್ಯಾಣಶೆಟ್ಟಿ, ಮುಧೋಳ (ಪ್ರಭುದೇವರ ಅಮೃತ ಶಿಲೆಯ ಪುತ್ಥಳಿಗಾಗಿ)	50001-00
2.	ಡಿ. ಎಂ. ಬಾತಗ, ಮುಧೋಳ	5001 00
3.	ಶಂಕರ ಉತ್ತೂರು, ,,	5001 00
4.	ಕ್ಷೇತ್ರಾಧಿಕಾರಿಗಳ ಆಫೀಸ್ ಸಿಬ್ಬಂದಿ	5001-00
5.	ದುಂಡಪ್ಪ ಚನ್ನಬಸಪ್ಪ ಹೊನವಾಡ,	5001-00
6.	ಶಂಕರಗೌಡ ಹುಚ್ಚಪ್ಪಗೌಡ ಪಾಟೀಲ	5001-00
7.	ರಾಮಪ್ಪ ಗುರಪ್ಪ ಪಾಟೀಲ	2001-00
8.	ಸಿದ್ಧಯ್ಯಸ್ವಾಮಿ ಹೊಸಮಠ, ಚಿಂಚಖಂಡಿ	1500-00
9.	ವೀರಭದ್ರಪ್ಪ ಬಸಪ್ಪ ತಾಂವಸಿ	1001-00
10.	ತಾರಾಬಾಯಿ ಜಯಣ್ಣಾ ಲವಾಣಿ	1001-00
11.	ಕೆ. ಇ. ಬಿ. ಸಿಬ್ಬಂದಿ, ಮುಧೋಳ	1554-00
12.	ಜಿ. ಎಲ್. ಬಿ. ಸಿ. ಸಿಬ್ಬಂದಿ	1601-00
13.	ನ್ಯೂ ಗರ್ಲ್ಸ್ ಹೈಸ್ಕೂಲ್ ಸಿಬ್ಬಂದಿ	1350-00
14.	ಪುಷ್ಪಾವತಿ ಸಿದ್ಧರಾಮಪ್ಪ ಪಾಟೀಲ, ಹೊಸಕೋಟೆ	1001.00

ದಾಸೋಹ ನಿಧಿಗೆ 1111-00 ರೂ. ಸಲ್ಲಿಸಿದವರು

(ಜುಲೈ-ಆಗಸ್ಟ್ ಸಂಚಿಕೆಯಿಂದ ಮುಂದುವರಿದಿದೆ)

ಕ್ರ. ಸಂ.	ಹೆಸರು	ಊರು
	ಶರಣರುಗಳಾದ :	
1212	ಗಿರಿಜಮ್ಮ, ಮೃತ್ಯುಂಜಯ ಹೊಸಮನಿ.	ಹಿರೇಕೆರೂರು
1213	ಪ್ರೇಮಾ, ಬಸವರಾಜ. ಶಿವಲಿಂಗಪ್ಪ. ಮಣ್ಣಗಿ	"
1314	ಬಸವರಾಜ ತಿರುಕಪ್ಪ ತಂಬಾಕದ	"
1215	ಬಸಮ್ಮ ಕೊಂ ಲಿಂಗನಗೌಡ ತೆಂಬದ	"
1216	ಹಿರೇಕೆರೂರ ತಾಲೂಕ ಪ್ರಾ. ಶಾಲಾ ಶಿಕ್ಷಕರ ಸಹಕಾರಿ ಸಂಘ	"
1217	ಸುರೇಶ ಚನ್ನವೀರಪ್ಪ ಎತ್ತಿನಹಳ್ಳಿ (ತಿಳುವಳ್ಳಿ)	"

Digitalized by e-Sahithya Documentation Forum
Sponsored by Sarayu Foundation Trust

1218	ಚಂದ್ರಶೇಖರಪ್ಪ ಕೊಟ್ರಪ್ಪಾ ಕುಬಸದ	ಹಿರೇಕೆರೂರು
1219	N. G. ಬಣಗಾರ (ನ್ಯಾಯವಾದಿಗಳು)	”
1220	ಪ್ರಭುಲಿಂಗಪ್ಪಾ ದುಂಡಪ್ಪ ಶೆಟ್ಟರ	”
1221	ಪಂಚಲಿಂಗಪ್ಪ ದೊಡ್ಡಬಸಪ್ಪ ಯಕಲಾಸಪುರ 11111-00ರೂ.	ಹುಬ್ಬಳ್ಳಿ
1222	ರಾಮಪ್ಪ ತಮ್ಮಪ್ಪಣ್ಣ ತೋಳಮಟ್ಟಿ	ಮುಧೋಳ
1223	ಡಿ. ಎಂ. ಬಾಡಗಿ	”
1224	ತುಕ್ಕಪ್ಪ ಶಿವಲಿಂಗಪ್ಪ ಕುಂಬಾರ	”
1225	ಬಸವರಾಜ ಚನ್ನಪ್ಪ ಕರೇಹೊನ್ನ	”
1226	ಸಿದ್ದಮ್ಮ ಬೆಳಗಲಿ	”
1227	R. T. O. ಆಫೀಸದ ಚಲವಾದಿ	ವಿಜಾಪೂರ
1228	T. B ಕದಾಪೂರ	ಮುಧೋಳ
1229	ಅಡಿವೆಪ್ಪ ಅಪ್ಪಣ್ಣಪ್ಪ ಕುಂಬಾರ	”
1230	ಶಿವಕುಮಾರ ಗಂಗಾಧರ ಹನಗಂಡಿ	”
1231	ಈಶ್ವರಪ್ಪ ವೀರಭದ್ರಪ್ಪ ಮುಗಳ್ಯಾಳ	”
1232	ಶಿವರಾಯಪ್ಪ ನಿಂಬಣ್ಣ ನೀಲಣ್ಣವರ	ಇಂಗಳಗಿ
1233	ರಾಮಣ್ಣ ಕಲ್ಲಪ್ಪಗೌಡ ಪಾಟೀಲ	”
1234	ಸುರೇಶ ಬಸಪ್ಪ ಹೂಟಿ	ವೀರಾಪೂರ
1235	ಶಿವಪ್ಪ ಗುರಪ್ಪ ಕೋಮಾರ	ಇಂಗಳಗಿ
1236	V. M. ದೊಡಮನಿ (ಎಂಜಿನೀಯರ್)	ಮುಧೋಳ
1237	ಡಾ॥ ಕೃಷ್ಣಾ ಯಮನಪ್ಪ ಸದಲಗೀ	”
1238	ಶಿವಲಿಂಗಪ್ಪ ಸಿದ್ರಾಮಪ್ಪ ತೇಲಿ	”
1239	ನಿಂಗಪ್ಪ ಕಲ್ಲಪ್ಪ ಲಕ್ಷಾಣಿ	ಯಡಹಳ್ಳಿ
1240	ದಾನಪ್ಪ ಪಂಚಪ್ಪಣ್ಣ ನವನಕ್ಕಿ	ಮುಧೋಳ
1241	ರಾಚಯ್ಯ ವಿರೂಪಾಕ್ಷಯ್ಯ ವಸ್ತ್ರದ	”
1242	ಪ್ರಕಾಶ ವಿರೂಪಾಕ್ಷಪ್ಪ ಬಂಡಿ	”
1243	ಭೀಮಪ್ಪ ಅಪ್ಪಾಸಾಹೇಬ ದೂಳಶೆಟ್ಟಿ	ಇಂಗಳಗಿ
1244	ಕಲ್ಲಪ್ಪ ಬಸಪ್ಪ ಗೂಳಪ್ಪನವರ	”
1245	ಗುರುಪಾದ ಬಸಪ್ಪ ಅವ್ವಣ್ಣಗೋಳ	ಮುಧೋಳ
1246	ಶಂಕರೆಪ್ಪ ಈರಪ್ಪ ಗಣಿ	ಗುಳೇದಗುಡ್ಡ
1247	ಸಾತವೀರಪ್ಪ ಸಿದ್ದಪ್ಪ ಕೊಪ್ಪ	ಮುಧೋಳ

1248	ಮುತ್ತವ್ವಾ ನಿಂಗಪ್ಪ ಸೂನಗದೆ	ಇಂಗಳಗಿ
1249	ನಿಂಗಪ್ಪ ಬಸಲಿಂಗಪ್ಪ ದೂಳಪದ	ಮುಧೋಳ
1250	ರವೀಂದ್ರ ಮಾರುತಿ ಶಿಂಧೆ	ಮುಧೋಳ
1251	ಬಸವರಾಜ ಮುರಿಗೆಪ್ಪ ಗಣಿ	”
1252	ಅಡಿವಯ್ಯ ಬಸಯ್ಯ ದರೂರ	”
1253	ವೀರಪ್ಪ ಗಿರಿಮಲ್ಲಪ್ಪ ಮೂಲಿಮನಿ	”
1254	ಹನಮಂತಗೌಡ ಭೀಮನಗೌಡ ಪಾಟೀಲ	ಯಡಹಳ್ಳಿ
1255	ಮಲ್ಲಪ್ಪ ಗುರಪ್ಪ ತೇಲಿ	ಬರಗಿ
1256	ಮಲ್ಲಪ್ಪ ಗುರಪಾದಪ್ಪ ದೊಡಮನಿ	ಕಲಾದಗಿ
1257	ಶಿವನಗೌಡ ದೊಡ್ಡಪ್ಪಗೌಡ ಪಾಟೀಲ	ಯಡಹಳ್ಳಿ
1258	ತುಂಗಭದ್ರಾ ಮಲ್ಲಪ್ಪ ಕತ್ತಿ	ಮುಧೋಳ
1259	ಮಹಾದೇವ ರುದ್ರಪ್ಪ ಕುಂಬಾರ	ಉತ್ತೂರು
1260	ಕಲ್ಲನಗೌಡ ಹನುಮಂತಗೌಡ ಪಾಟೀಲ	ರೂಗಿ
1261	ಬಸಪ್ಪಾ ಗುರುಪಾದಪ್ಪ ಪೂಜಾರಿ	ಮುಧೋಳ
1262	ಶಿವಬಸವಯ್ಯ ಸ್ವತಂತ್ರಯ್ಯ ಸ್ವತಂತ್ರಮಠ	”
1263	ಧನಪಾಲ ತಿಪ್ಪಣ್ಣ ಸನ್ನಾಯಕ	”
1264	ಮಲ್ಲಪ್ಪ ಬಸಲಿಂಗಪ್ಪ ಧವಳೇಶ್ವರ	ಯಾದವಾಡ
1265	ರಾಚಯ್ಯ ಗುರುಪಾದಯ್ಯ ಗೊಡಚಿ	”
1266	ಬಸಪ್ಪ ಬಸಲಿಂಗಪ್ಪ ನ್ಯಾಮಗೌಡ	”
1267	ಶಾರದಾ ಕೊಪ್ಪ	”
1268	ವೆ॥ ಗಣಪತರಾವಜಿ ವಾಘ	ಕಲಾದಗಿ
1269	ಮುರಗೆಪ್ಪ ಬಸಪ್ಪ ಕೊಪ್ಪ	ಮುಧೋಳ
1270	ಮಲ್ಲಯ್ಯ ವಿರುಪಾಕ್ಷಯ್ಯ ವಸ್ತ್ರದ	”
1271	ವಿ. ಗೌರಮ್ಮ	ಬಳ್ಳಾರಿ
1272	ಗಿರಿಜಾಂಬ ಅರಸು,	ಬ್ರಹ್ಮಸಂದ್ರ
1273	ಕೆಂಚಮ್ಮ ಬಸವ ದರ್ಶನ,	ಮೈಸೂರು
1274	ಭೋಗಾನಂಜುಡಯ್ಯ ಮತ್ತು ಮಕ್ಕಳು	ಬೆಂಗಳೂರು
1275	ಬಸವೇಶ್ವರ ಭಜನಾ ಮಂಡಳಿ,	ಬೆಂಗಳೂರು

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲ ಸಂಗಮದೇವಾ

Digitalized by e-Sahithya Documentation Forum
Sponsored by Sarayu Foundation Trust

ಧರ್ಮಗ್ರಂಥ ನಿಧಿಗೆ, 1001-00 ರೂ. ಸಲ್ಲಿಸಿದವರು

(ಜುಲೈ-ಆಗಸ್ಟ್. ಸಂಚಿಕೆಯಿಂದ ಮುಂದುವರಿದಿದೆ)

ಕ್ರ.ಸಂ.	ಹೆಸರು	ಊರು
	ಶರಣರುಗಳಾದ :	
460	ಶಿವಾನಂದಪ್ಪ ಬಸಟ್ಟೆಪ್ಪ ಶೆಟ್ಟರ	ಹಿರೇ ರೂರು
461	ಚಂದ್ರಶೇಖರಪ್ಪ. ದೇವಪ್ಪ ತಂಬಾಕದ ಮತ್ತು ಮಕ್ಕಳು	ಹಿರೇಕೆರೂರು
462	ಡಿ. ಎಂ. ಬಾಡಗಿ	ಮುಧೋಳ
463	ತುಕ್ಕಪ್ಪಾ, ಶಿವಲಿಂಗಪ್ಪಾ ಕುಂಬಾರ.	"
464	ಶಂಕರ. ಉತ್ತೂರು.	"
465	K. P. ನಾಡಗೌಡ, ಮಾಜಿ. M.L.A.	"
466	ಲಕ್ಷ್ಮಪ್ಪ. ಶಿವಪ್ಪ ಚಿನ್ನಣ್ಣವರ.	ಇಂಗಳಗಿ
467	ನಿಂಗಪ್ಪಾ ಕಲ್ಲಪ್ಪ ಲಕ್ಷಾಣಿ	ಎಡಹಳ್ಳಿ
468	ರಾಚಯ್ಯ ವಿರುಪಾಕ್ಷಯ್ಯ ವಸ್ತ್ರದ	ಮುಧೋಳ
469	ರಾಮಲಿಂಗಪ್ಪ ಮಳಿಯಪ್ಪ ಹೆರಕಲ್	ಇಂಗಳಗಿ
470	ಬಸವರಾಜ ಗೂಳಪ್ಪಾ ಸೂಳಿಬಾವಿ	ಶಿರೂರ
471	ಸುಲೋಚನಾ G. ಜವಳಗಿ	ಮುಧೋಳ
472	ಉಮಾದೇವಿ ಗುರುಬಸಪ್ಪಾ ಚೌದರಿ, ವಕೀಲರು	"
473	ಹನುಮಂತಗೌಡ ಭೀಮನಗೌಡ ಪಾಟೀಲ	ಎಡಹಳ್ಳಿ
474	ಶ್ರೀನಿವಾಸ ಕರೂರ	ತಮಿಳುನಾಡು
475	ಸಂಗಮೇಶ ಮಲ್ಲಪ್ಪಾ ಸಿರವಗೋಳ	ಮುಧೋಳ
476	ಸಂಗಪ್ಪಾ, ಕಲ್ಲಪ್ಪಾ ಮನಗೊಂಡ	"
477	ಮಲಪ್ರಭಾ ಶಂಕರಪ್ಪಾ ಅಲ್ಲಣ್ಣವರ	ಅಂಕಲಗಿ
478	ತುಂಗಭದ್ರಾ ಮಲ್ಲಪ್ಪಾ, ಕತ್ತಿ	ಮುಧೋಳ
479	ಕಲ್ಲಪ್ಪ ಹೊಳೆಪ್ಪ ಸಬರದ	"
480	ಶ್ರೀ ಶೈಲಪ್ಪಾ ಬಿ. ಗೌಡನ್ನವರ	"
481	ಘಟಿಗೆಪ್ಪಾ ಆವ್ವಣ್ಣಪ್ಪಾ ಕುಂಬಾರ	"
482	ಪ್ರೊ: ಪಿ. ಬಿ. ಬಡಿಗೇರ	"

ವಿ. ಸೂ. : ಬಸವ ಧರ್ಮ ಪೀಠಕ್ಕೆ 501-00 ರೂಗಳನ್ನು ಪೂಜಾನಿಧಿ, ಕಟ್ಟಡ ನಿಧಿಗೆ ಕೊಟ್ಟವರ ಯಾದಿಯನ್ನು ಪ್ರಕಟಿಸಿಲ್ಲ. ಯಾದಿ ಬಹಳಪ್ಪು ಪುಟಗಳನ್ನು ಆಕ್ರಮಿಸಿ, ಓದುಗರಿಗೆ ಬೇಸರ ತಂದೀತೆಂದು 1001 ರೂ.ಗಳಿಗೆ ಸೀಮಿತಗೊಳಿಸ-ಲಾಗಿದೆ. ದಾನಿಗಳು ತಪ್ಪು ತಿಳಿಯಬಾರದು.

ಈ ಎಲ್ಲ ಧನ ದಾಸೋಹಿಗಳಿಗೆ ಜಗತ್ಕರ್ತನಾದ ಪರಮಾತ್ಮನು ಮತ್ತು ಧರ್ಮಪಿತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕೊಡಲೆಂದು ಹಾರೈಸುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲಸಂಗಮ

ತ್ಯಾಗವು ಹುಸಿಯಾಗದು

—ಮಾತಾಜಿ

"ಬೌದ್ಧ ಸ್ಮಾರಕಗಳ ರಕ್ಷಣೆಗೆ 5 ಲಕ್ಷ ಡಾಲರ್ ನೆರವು" ಎಂಬ ಶೀರ್ಷಿಕೆಯಡಿಯಲ್ಲಿ ದಿ. 26-6-1992 ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಓದಿ ಬಹಳ ಸಂತೋಷವಾಯಿತು. "ಟೋಕಿಯೋ, ಜೂನ್ ೨೫ ಭಾರತದಲ್ಲಿಯ ಬೌದ್ಧ ಸ್ಮಾರಕಗಳನ್ನು ಸಂರಕ್ಷಿಸುವ ಯೋಜನೆಗಾಗಿ ಜಪಾನ್ ಸರಕಾರ ೫ ಲಕ್ಷ ಡಾಲರ್ ನೆರವು ನೀಡಲಿದೆ.

ಯುನೆಸ್ಕೊ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ನಿಧಿಯಿಂದ ನೀಡುವ ಈ ಹಣವನ್ನು ಭೂಪಾಲ ಹೊರವಲಯದಲ್ಲಿರುವ ಸಾತುದ್ರಾ ಮತ್ತು ಸಾಂಚಿಯ ಸ್ತೂಪಗಳೂ ಸೇರಿದಂತೆ ಬೌದ್ಧ ಸ್ಮಾರಕಗಳ್ನು ಸಂರಕ್ಷಿಸಲು ಬಳಸಲಾಗುವುದು.

ಭಾರತದ ಪ್ರಧಾನಿ ಪಿ. ವಿ. ನರಸಿಂಹರಾವ್ ಅವರಿಗೆ ಜಪಾನ್ ಪ್ರಧಾನಿ ಮಿಯಾ ಜಾವಾ ಅವರು ಈ ನಿರ್ಧಾರ ತಿಳಿಸಿದರು". ಈ ವರದಿಯನ್ನು ಓದಿ ಚನ್ನಬಸವಣ್ಣನವರ ವಚನವು ಪುನಃ ನೆನಪಾಯಿತು.

ಭೂಮಿಯೊಳಗೆ ಬೀಜಬಿದ್ದಲ್ಲಿ ಕೆಟ್ಟಿತ್ತೆನ್ನಬೇಡ
ಮುಂದಣ ಫಲದೊಳಗರಸಿಕೊ
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ
ಮುಂದಣ ಬಣ್ಣದೊಳಗರಸಿಕೊ
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ
ಮುಂದಣ ಅಗ್ನಿಯೊಳಗರಸಿಕೊ

ಭೂಮಿಯಲ್ಲಿ ಬಿದ್ದ ಬೀಜ ನಾಶವಾಗದು ಎಂದಾದರೊಂದು ದಿನ ಫಲಕೊಡುವುದು ಪುಟಕ್ಕಿಕ್ಕಿದ ಬಂಗಾರ ಕಾಂತಿಯಿಂದ ಹೊಳೆಯುವುದು; ಹಚ್ಚಿದ ದೀಪ ಸುಟ್ಟಂತೆ ಕಂಡರೂ ಬೆಳಕು ಕೊಡುವುದು ತ್ಯಾಗದ ಮಹಿಮೆ ಇದು. ಪ್ರಾಮಾಣಿಕ ಕಳಕಳಿಯಿಂದ ಮಾಡಿದ ಪ್ರಯತ್ನ ಆ ಕಾಲದಲ್ಲಿ ಅರ್ಥಮಾಡಿಕೊಳ್ಳಲ್ಪಡದಿದ್ದರೂ ನಂತರವಾದರೂ ಬೆಳಕಿಗೆ ಬರುವದು.

ಭಗವಾನ್ ಬುದ್ಧನು ಉದಾತ್ತ ಉದ್ದೇಶದಿಂದ ತ್ಯಾಗ ಮಾಡಿದನು. ಹೊಸ ಧರ್ಮವೊಂದನ್ನು ಕೊಟ್ಟನು. ಅದು ವರ್ಣಾಶ್ರಮ ವಿರೋಧಿಯಾಗಿದ್ದುದರಿಂದಲೂ, ವೇದಗಳ ಪ್ರಾಮಾಣ್ಯವನ್ನು ಒಪ್ಪದ್ದರಿಂದಲೂ, ಸನಾತನ ಧರ್ಮದ ಬಹು

Digitalized by e-Sahithya Documentation Forum
Sponsored by Sarayu Foundation Trust

ದೇವೋಪಾಸನೆ, ಪುರೋಹಿತಶಾಹಿಯನ್ನು ಮನ್ನಿಸದ್ದರಿಂದಲೂ ಈ ದೇಶದಲ್ಲಿ ಸಂಕಷ್ಟ ವನ್ನೇದುರಿಸಿತು. ಬೌದ್ಧ ಬಿಕ್ಷುಗಳು ಅಮಾನುಷವಾದ ಹಲ್ಲೆಗೊಳಗಾದರು; ತಮ್ಮ ಧರ್ಮ ಸಾಹಿತ್ಯಗಳ ರಕ್ಷಣೆಗಾಗಿ ಜೀವದ ಹಂಗುದೊರೆದು, ಸಾಹಿತ್ಯವನ್ನು ತೆಗೆದುಕೊಂಡು ಭಾರತದಿಂದ ಹೊರಗೆ ಹೋದರು. ಟಿಬೆಟ್ ನೇಪಾಳಗಳ ಮೂಲಕ ಪಾರಾಗಿ, ಈ ವಿಷಮ ಪರಿಸ್ಥಿತಿಯನ್ನೂ ಧರ್ಮ ಪ್ರಚಾರಕ್ಕೆ ಬಳಸಿಕೊಂಡರು. ಪರಿಣಾಮ ವಾಗಿ ಬೌದ್ಧ ಧರ್ಮ ಚೀನಾ, ಟಿಬೆಟ್ಟು, ಮಲೇಷಿಯಾ, ಜಪಾನ್ ಮುಂತಾದ ಕಡೆ ಹುಲುಸಾಗಿ ಹಬ್ಬಿತು. ಬೌದ್ಧ ಧರ್ಮವನ್ನು ಅನೇಕ ರಾಷ್ಟ್ರಗಳು ತಮ್ಮ ರಾಷ್ಟ್ರ ಧರ್ಮವನ್ನಾಗಿ ಮಾಡಿಕೊಂಡಿವೆ.

ಆ ಋಣವನ್ನು ಇದೀಗ ಸಾಂಕೇತಿಕವಾಗಿ ತೀರಿಸುತ್ತಿವೆ. ಬುದ್ಧನು ಹುಟ್ಟಿದ ಭಾರತ ಎಲ್ಲ ಬೌದ್ಧರಿಗೆ ಧರ್ಮಭೂಮಿಯಾದ ಕಾರಣ ಈ ಋಣಭಾವದಿಂದ ಇಂದು ಬೌದ್ಧ ರಾಷ್ಟ್ರಗಳು ತಮ್ಮ ಗುರುಋಣನ್ನು ಈ ರೂಪದಲ್ಲಿ ತೀರಿಸುತ್ತಿರುವುದು ಅಭಿ ನಂದನೀಯ. ಬೌದ್ಧ ಧರ್ಮದ ಏಕಗುರು ನಿಷ್ಠೆ ನಮಗಿಂದು ಮಾದರಿಯಾಗಬೇಕಾಗಿದೆ.

ಬಸವಾದಿ ಪ್ರಮಥರು ಪುರೋಹಿತಶಾಹಿಯ ವಿರುದ್ಧ ಮಹಾನ್ ಹೋರಾಟ ವನ್ನೇ ಕೈಗೊಂಡರು: ಪರಿಣಾಮವಾಗಿ ಅವರೂ ಬಹಳ ಸಂಕಷ್ಟಗಳನ್ನೆದುರಿಸಿದರು. ಸಾಹಿತ್ಯ ರಕ್ಷಣೆಗಾಗಿ ಶರಣರು ಪಟ್ಟ ಕಷ್ಟ ಅಷ್ಟಿಷ್ಟಲ್ಲ, ಅದಕ್ಕಾಗಿ ಸಹ್ಯಾದ್ರಿಯ ದುರ್ಗಮ ಅರಣ್ಯವನ್ನು ಹೊಕ್ಕರು. ಅವರೂ ಈ ಪುರೋಹಿತಶಾಹಿಯ ದಬ್ಬಾಳಿಕೆ. ಯನ್ನು ಧರ್ಮಪ್ರಚಾರಕ್ಕೆ ಸಾಧನವಾಗುವಂತೆ ಬಳಸಿಕೊಂಡರು.

ದೂರದೂರವೆ ಸಾಗಿ ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರುತಳಿದು । ಮರೆಯಾಗಿ
ಆರಿ ಕೆಂಡಡಗಿ ಬೂದಿಯೊಳು ॥
ಮಂಟಪದ ಹೆಜ್ಜೇನ ಗಂಟೇರು ಕೆಡಸಿದರೆ
ಕುಂಟಿತವೆ ಜೇನ ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ ?
ಶಿವಶರಣ ದುಂಬಿಗಳು ಭವದೊಳಗೆ ಹಾರ್ಹಾರಿ
ಶಿವಮತದ ಹುಟ್ಟ ಕಟ್ಟಿದವು । ವಚನಗಳು
ಸವೆಯುದುಳಿದಿರುವ ಹೊಸಜೇನು ॥

ಸಾಹಿತ್ಯವನ್ನು ಹೊತ್ತು, ಹಳ್ಳಿಹಳ್ಳಿಗಳನ್ನು ಸೇರಿ, ಬೂದಿ ಮುಚ್ಚಿದ ಕೆಂಡದಂತೆ ಅಡಗಿದರು. ಕಲ್ಯಾಣದಲ್ಲಿ ಕಟ್ಟಿದ್ದ ಜೇನುಹುಟ್ಟಿಗೆ ಮತಾಂಧರು ಕಿಚ್ಚನ್ನು ಇಕ್ಕಿದರು. ಶರಣರೆಂಬ ಜೇನ್ನೊಣಗಳು ಚದುರಿದರು. ಆದರೇನಂತೆ ಹೋದಲೆಲ್ಲ ಜೇನುಹುಟ್ಟು

ಕಟ್ಟಿದರು. ಶಿವಶರಣರೆಂಬ ಈ ಜೇನ್ನೊಣಗಳು ಕಟ್ಟಿ, ಕೊಟ್ಟ ಹೋದ ವಚನ ಸಾಹಿತ್ಯ ಸವೆಯದೆ ಉಳಿದಿರುವ ಹೊಸಜೇನು.

ಹೀಗೆ ಶರಣರ ಬಲಿದಾನದ ಫಲವಾಗಿ ವಚನ ಸಾಹಿತ್ಯದ ಐಸಿರಿ ಉಳಿಯಿತು. ಇಂಥ ಸಂಪತ್ತಿನ ವಾರಸುದಾರರು ನಾವು ಎಂದು ಹೆಮ್ಮೆಯಿಂದ ಬೀಗುತ್ತಿದ್ದೇವೆ. ಇಷ್ಟೇ ಸಾಲದು ಆ ಶರಣರ ಋಣ ತೀರಿಸುವ ಕೆಲಸಕ್ಕೆ ಸನ್ನದ್ಧರಾಗಬೇಕು. ನನಗೀಗ ಬೌದ್ಧ ಧರ್ಮದ ಬಗ್ಗೆ ಮತ್ಸರ, ಪುರೋಹಿತಶಾಹಿಯ ಬಗ್ಗೆ ಕೋಪ ಉಂಟಾಗುತ್ತಿದೆ. ಈ ಪುರೋಹಿತಶಾಹಿ ಜನ ಇನ್ನಷ್ಟು ಹೆಚ್ಚು ತೊಂದರೆ ಕೊಟ್ಟು ಬುದ್ಧ ಧರ್ಮದಂತೆ ಬಸವ ಧರ್ಮವನ್ನೂ ಭಾರತದಿಂದ ಹೊರಗೆ ಅಟ್ಟಿದ್ದರೆ ಅದೂ ಹೊಸರೂಪ, ಹೊಸ ಶಕ್ತಿಪಡೆದು, ವಿಶ್ವದಲ್ಲಿ ಹಬ್ಬಿ ಇಲ್ಲಿಗೆ ಬರುತ್ತಿತ್ತೇನೊ; ಇಲ್ಲಿಯ ಅಂತರಂಗದ ಜಾತಿ-ವಾದಿಗಳಿಂದ ಕೃಶವಾಗಿ, ವಿಕೃತಗೊಂಡು ನರಳುವುದು ತಪ್ಪುತ್ತಿತು.

ವಿಶ್ವದಲ್ಲೇ ತನ್ನ ಕಾಯಕ ನಿಷ್ಠೆ, ಸ್ವಾಭಿಮಾನದಿಂದ ಅಗ್ರ ಪಂಕ್ತಿಯಲ್ಲಿರುವ ಜಪಾನ್ ತನ್ನ ಧರ್ಮಗುರು ಬುದ್ಧನ ಋಣ ತೀರಿಸಬೇಕೆಂಬ ಅಭಿಮಾನದಿಂದ ಭಾರತ ದಲ್ಲಿರುವ ಬೌದ್ಧ ಸ್ಮಾರಕಗಳನ್ನು ರಕ್ಷಿಸುತ್ತಿರುವುದು ಶ್ಲಾಘನೀಯವಾದುದಾಗಿದೆ. ಇಲ್ಲಿರುವ ಬಸವ ತತ್ತ್ವಾನುಯಾಯಿಗಳು ಶರಣರ ಸ್ಥಾನಗಳನ್ನು ರಕ್ಷಿಸಿ, ಬೆಳೆಸಬೇಕೆಂಬ ಕಳಕಳಿಯನ್ನು ಜಪಾನೀಯರಿಂದಲೇ ಕಲಿಯುವಂತಾಗಲಿ !

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ
ಸಾಮರ್ಥ್ಯಮಂ ಬಿತ್ತಿ, ಪ್ರತ್ಯಕ್ಷಗಳಂ ಬೆಳೆದು
ಗಣಪರ್ವಗಳ ಸಫಲಂ ಮಾಡಲೆಂದು ಬಂದ
ಕಾರಣಿಕ ಬಸವ, ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತ್ತು.
—ಹರಿಹರ

Digitalized by e-Sahithya Documentation Forum
Sponsored by Sarayu Foundation Trust

ಅರಿವಿಗೆ ಒಪ್ಪದ ಗಣಪತಿ ಪೂಜೆ

[ವಿಚಾರವಂತರಿಗೆ ಮಾತ್ರ]

ಇಂದು ಎಲ್ಲೆಡೆ ಗಣಪತಿ ಪೂಜೆಯು ಅದ್ದೂರಿಯಾಗಿ ನಡೆಯುತ್ತಿರುವುದು ಸರಿಯಷ್ಟೆ! ಶ್ರೀ ಬಾಲಗಂಗಾಧರ ತಿಲಕ್‌ರವರು ಹಿಂದೂ ಸಂಘಟನೆಗಾಗಿ ಇದನ್ನು ಸಾಮೂಹಿಕವಾಗಿ ನಡೆಯಲೆಂದು ಹೇಳಿದ ನಂತರ ದೇಶಾದ್ಯಂತ ಆಚರಿಸಲಾಗುತ್ತಿದೆ.

ಮುಖ್ಯವಾಗಿ ಇದು ವೈದಿಕ ಪರಂಪರೆಯವರು ಮಾಡುವ ಹಬ್ಬ. ಕಾರಣ ಅವರಲ್ಲಿ ದೇವತಾ ಪೂಜೆಗೆ ಅತಿ ಮಹತ್ವ, ಆದರೆ ಲಿಂಗವಂತರಿಗೆ ಇದು ಹಬ್ಬವೆ? ಇದನ್ನು ಆಚರಿಸುವ ಬಗ್ಗೆ ಲಿಂಗವಂತರು ವಿಚಾರಮಾಡಿದ್ದಾರೆಯೇ? ಒಂದು ಪಕ್ಷ ವಿಚಾರ ಮಾಡಿದ್ದರೆ, ವೈಚಾರಿಕತೆಯನ್ನು ಹೇಳುವ ಬಸವ ಧರ್ಮವನ್ನು ರೂಢಿಸಿ ಕೊಂಡಿದ್ದಾರೆಯೇ? ಅಥವಾ ವೈಚಾರಿಕತೆ ನಮಗೆ ವೈ *[Why]*? ಎಂದು ಕೊಂಡು ತಮ್ಮ ಪಾಡಿಗೆ ತಾವು ಆಚರಿಸುತ್ತಿರಬಹುದೆ? ಗಣಪತಿಯನ್ನು ಪೂಜಿಸುವ ಮೊದಲು ಆ ಬಗ್ಗೆ ಏನನ್ನು ತಿಳಿದುಕೊಂಡಿರುವೆವು? ಗಣಪತಿ ದೇವರೇ? ದೇವತಾಪುರುಷನೆ? ಆತನ ಹುಟ್ಟು ಸಹಜವೇ? ಇದನ್ನೆಲ್ಲಾ ಎಂದಾದರೂ ನಾವು ವಿವೇಚಿಸಿದ್ದೇವೆಯೇ?

ಬಸವಾದಿ ಪ್ರಮಥರು ಕೊಟ್ಟ ತತ್ವಗಳ ಅವಲೋಕನ ಮಾಡಿದರೆ–ಶರಣರು ಏಕದೇವೋಪಾಸಕರು. ದೇವತಾ ಪೂಜೆ ಒಪ್ಪರು. ದೇವನ ಪೂಜೆಯನ್ನು [ಇಷ್ಟಲಿಂಗ ಪೂಜೆ] ಬಿಟ್ಟು ಬೇರೆ ಯಾವ ಪೂಜೆಯನ್ನೂ ಸಹಿಸರು. ಆದ್ದರಿಂದ ಲಿಂಗವಂತ ಧರ್ಮದ ಲಿಂಗ ತತ್ತ್ವಕ್ಕೂ ಗಣಪತಿಯ ತತ್ವಕ್ಕೂ ಅಜಗಜಾಂತರ ವ್ಯತ್ಯಾಸ. ಇದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಗಣಪತಿಯ ಹುಟ್ಟು ಅಸಹಜ ಹುಟ್ಟು. ಪಾರ್ವತಿಯ ದೇಹದ ಮೇಲಿನ ಮಣ್ಣಿನಿಂದ ಮೂರ್ತಿ ಮಾಡಿ ನಂತರ ಅದಕ್ಕೆ ಜೀವಕೊಟ್ಟಾಗ ಗಣಪತಿಯು ಹುಟ್ಟಿದನು........ಎಂಬರು. ಪೌರಣಿಕ ಹಿನ್ನೆಲೆಯಲ್ಲಿ ಅಥವಾ ಯಾವುದೇ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಯೋಚಿಸದೆ ಸ್ವಂತಿಕೆಯಿಂದ ವಿಚಾರ ಮಾಡಿದರೆ ನಮಗೆ ಈ ಕಲ್ಪನೆಗಳು ಸರಿಯೋ ತಪ್ಪೋ ಎಂದು ಗೊತ್ತಾಗುತ್ತದೆ.

ಬಸವಾದಿ ಪ್ರಮಥರು ಗಣಪತಿ ಪೂಜೆಯನ್ನು ಒಪ್ಪರು. ಗುರುಬಸವಣ್ಣನವರ ಪ್ರಕಾರ ಗಣಪತಿ ದೇವರಲ್ಲ, ದೇವರಲ್ಲದ ಯಾವುದೇ ದೇವತೆ [ಕಾಲ್ಪನಿಕ ವ್ಯಕ್ತಿ]ಯನ್ನು ಅವರೆಂದೂ ಮನ್ನಿಸರು, ಆದ್ದರಿಂದಲೇ ಅವರು ಹೇಳುತ್ತಾರೆ....

ಹರ ಶಕ್ತಿಗಳಲ್ಲಿ ಒಂದಾದ ಬೆನಕ ಭೈರವ ಷಣ್ಮುಖರ
ಮಹಾ ಹರನ ಮಕ್ಕಳೆಂಬ ಪಾತಕಿ ನೀ ಕೇಳಾ !

ಹರಿ ಹರನು ಒಂದೆಂಬ ಶಿವದ್ರೋಹಿ ನೀ ಕೇಳಾ
ಹರಿ ಸಹಿತಾರರಿಂದತ್ತ ಅಜಾತನ ಚರಿತ್ರ ಅಪ್ರತಿಮ
ಕೂಡಲ ಸಂಗಮ ದೇವನೊಬ್ಬನೆ ಕಾಣಿರೋ !

ಗಣಪತಿ ಪರಮಾತ್ಮನ ಮಗನಲ್ಲ, ಅವನು ಹರಶಕ್ತಿಗಳಲ್ಲಿ ಹುಟ್ಟಿದವನು. ಅಂದರೆ ಶಿವಭಕ್ತರ ಸಂತತಿಯಲ್ಲಿ [ಯೋಗಿ ಶಿವನ ಮಗನಾಗಿ]* 1 ಜನಿಸಿದವನು. ಅಲ್ಲಮ ಪ್ರಭುಗಳು ತಮ್ಮ ವಚನದಲ್ಲಿ...............

ಪಾರ್ವತಿಯ ಪರಶಿವನ ಸತಿಯೆಂಬ ಶಿವದ್ರೋಹಿಗಳು ನೀವು ಕೇಳಿರೆ,
ಬೆನಕನ ಪರಶಿವನ ಮಗನೆಂಬ ಪಾತಕ ದುಃಖಿಗಳು ನೀವು ಕೇಳಿರೆ,
ಸ್ವಾಮಿ ಕಾರ್ತಿಕನ ನಮ್ಮ ಹರಲಿಂಗದ ಮಗನೆಂಬ ಲಿಂಗದ್ರೋಹಿಗಳು ನೀವು ಕೇಳಿರೆ,
ಭೈರವನ ಭಯಂಕರ ಹರನ ಮಗನೆಂಬ
ಭವಹರ ಗುರುದ್ರೋಹಿಗಳು ನೀವು ನೀವು ಕೇಳಿರೆ,

ಅಜಾತನ ಚರಿತ್ರ! ನಮ್ಮ ಗುಹೇಶ್ವರಲಿಂಗಕ್ಕೆ ಪ್ರಸಾದವ ಸಲ್ಲಿಸಿದಾತ ಪೂರ್ವಾಚಾರಿ ಸಂಗನಬಸವಣ್ಣನ ಮಗನಾಗಿ, ಆದಿಯ ಲಿಂಗ ಅನಾದಿಯ ಶರಣ

ಗುರುವಿನ ಗುರು ಪರಮ ಗುರುವರನ ತೋರಿದನಯ್ಯಾ,
ಸಿದ್ಧರಾಮಯ್ಯಾ ಚನ್ನಬಸವಣ್ಣನು.

ಪಾರ್ವತಿ ಪರಶಿವನ*2 ಹೆಂಡತಿಯಲ್ಲ, ಹಾಗೆಯೇ ಬೆನಕ (ಗಣಪತಿ) ಷಣ್ಮುಖರೂ ಸಹ ಅವನ ಮಕ್ಕಳಲ್ಲ, ಎಂದು ಹೇಳಿದ್ದಾರೆ. ಆದ್ದರಿಂದ ಬಸವ ಧರ್ಮದ ಪ್ರಕಾರ ದೇವನೆಂದರೆ-ನಿರಾಕಾರನು, ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದವನು. ದೇವನಿಗೆ ಹೆಂಡಿರು, ಮಕ್ಕಳು, ಸಂಸಾರ ಎಂಬುದಿಲ್ಲ. ಪ್ರತಿಯೊಂದು ಜೀವ ರಾಶಿಯೂ ಸಹ ಅವನಿಂದಲೇ ಹೊರಹೊಮ್ಮಿದುದರಿಂದ ನಾವೆಲ್ಲರೂ ಅವನ ಮಕ್ಕಳೇ, ಕೇವಲ ಗಣಪತಿ ಮಾತ್ರವಲ್ಲ.

ಗಣಪತಿ ಪೂಜೆಯಲ್ಲಿ ಆಹ್ವಾನ ವಿಸರ್ಜನೆಗಳಿವೆ. ಶರಣರು ಇದನ್ನು ಒಪ್ಪುವುದಿಲ್ಲ.

ಆಹ್ವಾನಿಸಿ ಕರೆವಲ್ಲಿ ಎಲ್ಲಿರ್ದನೊ,...............

ಈರೇಳುಲೋಕ[illegible]ಹದಿನಾಲ್ಕು ಭುವನವನೊಳಕೊಂಡಿಪ್ಪ ದಿವ್ಯ ವಸ್ತು ಮತ್ತೆ ವಿಸರ್ಜಿಸಿ ಬಿಡುವಾಗ ಎಲ್ಲಿರ್ದನೊ,

ಮುಳ್ಳೂರ ತೆರಹಿಲ್ಲದಿಪ್ಪ ಅಖಂಡ ವಸ್ತು
ಬರಿಯ ಮಾತಿನ ಬಳಕೆಯ ತೂತಜ್ಞಾನವ ಬಿಟ್ಟು,
ನೆಟ್ಟನೆ ತನ್ನ ಕರಸ್ಥಲದೊಳಗಿರುತಿಪ್ಪ ಇಷ್ಟಲಿಂಗವ ದೃಷ್ಟಿಸಿ ನೋಡಲು ಅಲ್ಲಿ

Digitalized by e-Sahithya Documentation Forum
Sponsored by Sarayu Foundation Trust

ತನ್ನ ಮನಕ್ಕೆ ಮನ ಸಂಧಾನವಾದ ದಿವ್ಯ ನಿಶ್ಚಯವೊದಗಿ,
ಆ ದಿವ್ಯ ನಿಶ್ಚಯದಿಂದ ಕುಳವಡಗಿ ಅದ್ವೈತವಪ್ಪುದು,
ಇದು ಕಾರಣ ನಮ್ಮ ಕೂಡಲಸಂಗನ ಶರಣರು
ಆಹ್ವಾನ-ವಿಸರ್ಜನೆ ಎಂಬ ಉಭಯ ಜಡತೆಯ ಬಿಟ್ಟು ತಮ್ಮ ತಮ್ಮ ಕರಸ್ಥಲದಲ್ಲಿ
ನಿಶ್ಚಯಿಸಿದರಾಗಿ. ಸ್ವಯಂಲಿಂಗವಾದರು ಕಾಣಿಭೋ !

ಎಂದು ಬಸವಣ್ಣನವರು ಹೇಳುತ್ತಾರೆ! ಅಂದರೆ ಮಣ್ಣಿನಿಂದ ಒಬ್ಬಾತ ಮೂರ್ತಿಯನ್ನು ಮಾಡುತ್ತಾನೆ. ಅದನ್ನು ಮನೆಗೆ ತಂದು ಅಲ್ಲಿ ಆ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ (ಯಾರ ಪ್ರಾಣ ?) ಮಾಡುತ್ತಾರೆ ! ಅಥವಾ ಪರಮಾತ್ಮನನ್ನು ಆ ಮೂರ್ತಿಗೆ ಆಹ್ವಾನಿಸುತ್ತಾರೆ. ನಾವು ಇಲ್ಲಿ ವಿಚಾರ ಮಾಡಬೇಕು-ದೇವನು ಎಲ್ಲಾ ಕಡೆ ಇದ್ದಾನೆ. ಅವನಿಲ್ಲದ ಠಾವೇ ಇಲ್ಲ, ಅವನು ಸರ್ವವ್ಯಾಪಿ, ಇಂಥಹ ಪರಮಾತ್ಮನನ್ನು ಎಲ್ಲಿಂದ ಎಲ್ಲಿಗೆ ಆಹ್ವಾನಿಸುತ್ತೀರಿ...! ಎಲ್ಲೆಡೆ ಅವನಿರಲು ಅವನನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಆಹ್ವಾನಿಸಲು ಬರುತ್ತದೆಯೇ ? ಅನಂತರ ಎಲ್ಲೆಡೆ ಅವನೇ ತುಂಬಿರುವಾಗ ಅವನನ್ನು ಎಲ್ಲಿಂದ ಎಲ್ಲಿಗೆ ಕಳಿಸುವಿರಿ ? (ವಿಸರ್ಜಿಸುವಿರಿ ?), ಹೀಗೆ ನಾವು ಆಚರಿಸಿದರೆ ಅದು ಪರಮಾತ್ಮನ ಸರ್ವವ್ಯಾಪಕತ್ವಕ್ಕೆ ಕುಂದು ಬರುವುದಿಲ್ಲವೇ ?

ಆದ್ದರಿಂದ ಗಣಪತಿಯ ವಿಗ್ರಹಕ್ಕೆ ಆಹ್ವಾನಿಸುವುದು ಹಾಗೂ ವಿಸರ್ಜಿಸುವುದು ಪರಮಾತ್ಮನ ತತ್ವಕ್ಕೆ ಚ್ಯುತಿ ಎಂಬುದನ್ನು ನಾವಿಲ್ಲಿ ಕಾಣಬಹುದು.

ಅತಿ ಮುಖ್ಯವಾಗಿ ಪರಮಾತ್ಮನನ್ನು ಕಾಣುವ ಮಾರ್ಗವೆಂದರೆ ಮನಸ್ಸಿನ ಚಂಚಲತೆಯನ್ನು ತೊಡೆಯುವುದು. ಅಕ್ಕಮಹಾದೇವಿ ಹೇಳುವಂತೆ "ಅತ್ತಿತ್ತ ಹರಿವ ಮನದ ಶಿರವನರಿದಡೆ ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ" ಎಂದು ಹೇಳುವಂತೆ, ಪರಮಾತ್ಮನನ್ನು ಕಾಣಲು, ಮನಸ್ಸಿನ ಚಂಚಲತೆ ತೊಡೆಯಲು ಸಾಧನ-ಸಾಧನೆ, ಬೇಕೇ ವಿನಹ ಯಾವುದೇ ಆಡಂಬರ ಬೇಕಿಲ್ಲ. ಅದಕ್ಕಾಗಿಯೇ ಬಸವಣ್ಣನವರು ಇಷ್ಟಲಿಂಗವೆಂಬ ಸಾಧನವನ್ನು ನೀಡಿದ್ದಾರೆ. ಇಷ್ಟಲಿಂಗ ಮೂಲತಃ ನಿರಾಕಾರ ಪರಮಾತ್ಮನ ಸ್ವರೂಪವನ್ನು ತೋರುವ ಸಾಧನವಾಗಿದ್ದರೂ, ಇದರ ಮೂಲ ಉದ್ದೇಶ ಮನಸ್ಸಿನ ಚಂಚಲತೆಯನ್ನು ತೊಡೆಯುವುದು, ಏಕಾಗ್ರತೆಯನ್ನು ಬೆಳೆಸುವುದು, ಹಾಗೂ ಅದೇ ಸಾಧನವನ್ನು ಪೂಜ್ಯ ವಸ್ತುವನ್ನಾಗಿ ಸ್ವೀಕರಿಸುವುದರಿಂದ ಭಕ್ತಿ ಭಾವನೆ ಬೆಳೆಯುವುದು. ಮತ್ತು ಯಾವುದೇ ಸಂದೇಹ ಭ್ರಾಂತಿಗಳಿಗೆ ಎಡೆಗೊಡದು, ಆದ್ದರಿಂದಲೇ ಶರಣರು ಇಷ್ಟಲಿಂಗ ಪೂಜೆಯನ್ನಲ್ಲದೆ ಅನ್ಯಕ್ಕೆ ತಲೆ ಬಾಗರು.

ಹೀಗೆ ನಾವು ಯಾವುದೇ ವಿಗ್ರಹ ಅಥವಾ ವಸ್ತುವನ್ನು ಪೂಜಿಸಬೇಕಾದರೆ, ಅದರ ಸ್ವರೂಪ, ಶ್ರೇಷ್ಠತೆ ಹಾಗೂ ಸಾರ್ಥಕತೆಗಳನ್ನು ಗಮನಿಸಬೇಕು. ಅದರ ಬಗ್ಗೆ ಸರಿಯಾದ ವಿಶ್ಲೇಷಣೆ ಮಾಡಬೇಕು. ಇಲ್ಲದಿದ್ದಲ್ಲಿ ಅದು ಮುಗ್ಧ ಪೂಜೆ ಅಥವಾ ಮೂಢ ಪೂಜೆ ಎಂದೆನಿಸುತ್ತದೆ. ಇದಕ್ಕೆಲ್ಲಾ ಚಿಂತಿಸಿಯೇ ಶರಣರು ಇಷ್ಟಲಿಂಗ ಪೂಜೆಯನ್ನು ಬಿಟ್ಟು ಬೇರೆ ಎಲ್ಲಾ ಪೂಜೆಗಳನ್ನು ದೂರೀಕರಿಸಿದ್ದಾರೆ.

ಹೀಗೆ ಗಣಪತಿಯ ಬಗ್ಗೆ ವಿಚಾರ ಮಾಡಿದಾಗ ಇಷ್ಟೆಲ್ಲ ಚಿಂತನೆ ಮೂಡಿ ಬರುತ್ತದೆ. ಇದನ್ನೆಲ್ಲ ಗಮನಿಸಿ ನಾಸ್ತಿಕನಾಗುವುದೇ ಲೇಸೆಂದು ತಿಳಿದು ಗಣಪತಿಯನ್ನು ಪೂಜಿಸದ 'ನಾಸ್ತಿಕನಾಗಿದ್ದೇನೆ.' ಯಾರು ನನಗೆ ಸರಿಯಾದ ರೀತಿಯಲ್ಲಿ ವೈಚಾರಿಕ ದೃಷ್ಟಿಕೋನದಿಂದ ಗಣಪತಿಯ ಬಗ್ಗೆ ಸೂಕ್ತ ಮಾಹಿತಿ ಒದಗಿಸುವರೋ ಅಲ್ಲಿಯ ತನಕ ಗಣಪತಿಯನ್ನು ಪೂಜಿಸದ ನಾಸ್ತಿಕನಾಗಲು ಸಂಕಲ್ಪ ಮಾಡಿದ್ದೇನೆ. ನೀವೂ ಈ ಸಂಕಲ್ಪ ಮಾಡಬಲ್ಲಿರಾ ?

— 'ನಾಸ್ತಿಕ'

1 * ಯೋಗಿಶಿವ–'ಶಿವ' ಎಂಬ ಹೆಸರುಳ್ಳ ಓರ್ವ ಋಷಿ ಮುನಿ.

2 * ಪರಶಿವ-ಪರಮಾತ್ಮ

(ಬಸವ ಕಿರಣ ಪತ್ರಿಕೆಯ ಕೃಪೆಯಿಂದ)

ಶಿವ ತಾನೀತ ಮರ್ತ್ಯಲೋಕವ ಪಾವನವ ಮಾಡಲು
ಗುರು ತಾನೀತ ಎನ್ನ ಭವರೋಗವ ಛೇಧಿಸಲು,
ಭಕ್ತ ತಾನೀತ ನೆನಗೆ ವಿಸ್ತಾರವಾಗಿ
ಜಂಗಮ ತಾನೀತ ಅನಾದಿ ಸಂಸಿದ್ಧ ಘನಮಹಿಮನಾಗಿ
ಲಿಂಗವು ತಾನೀತ ನೆನಗೆ ಪ್ರಾಣಲಿಂಗ ತಾನಾಗಿ
ಎನ್ನ ವಿಸ್ತಾರವು ತಾನೀತ ಎನ್ನ ನಿಲುಕಡೆಯು ತಾನಾಗಿ
ಎನಗೆ ಸರ್ವ ಸ್ವಾಯತವ ಮಾಡಿದ ಮಹಿಮನೀತ
ಕಾಣಾ ಕಲಿದೇವರದೇವಾ, ನಿಮ್ಮ ಶರಣ ಬಸವಣ್ಣನು !

—ಮಡಿವಾಳ ಮಾಚಿದೇವ

Digitalized by e-Sahithya Documentation Forum
Sponsored by Sarayu Foundation Trust

ಗಣಗಳ ಪತಿ

—ಬಿ. ಎನ್. ಸೋಲಾಪುರೆ
'ಬಾಲಕ' ಕಮಲನಗರ

ಪತಿ ಎಂದರೆ ಗಂಡ. ಗಣ ಎಂದರೆ ಗುಂಪು. ಗುಂಪಿನ ಗಂಡನೇ ಗಣಪತಿ ! ಪತಿಗಳಲ್ಲಿ ರಾಷ್ಟ್ರಪತಿ, ಅಧಿಪತಿ, ಪಶುಪತಿ, ರಘುಪತಿ, ಲಿಂಗಪತಿ, ಇತ್ಯಾದಿ. ಪತಿ ಶಬ್ದ ಗಂಡ, ನಾಯಕ, ಒಡೆಯ, ಪಿತ, ಪಾಲಕ, ರಕ್ಷಕ ಮುಂತಾದ ಅರ್ಥ ಕೊಡುತ್ತದೆ. ನಮ್ಮ ರಕ್ಷಕ ಹೇಗಿರಬೇಕು ಎನ್ನುವುದು ನಾವು ನಿರ್ಧಾರ ಮಾಡುತ್ತೇವೆ. ಆ ನಿರ್ಧಾರವೇ ಇಂದಿನ ರಾಷ್ಟ್ರಪತಿ, ಉಪರಾಷ್ಟ್ರಪತಿ ಇತ್ಯಾದಿ. ಅವರ ಅಪುಗೇಡಿತನಕ್ಕೆ ಹೀಯಾಳಿಸುವವರು, ಜಾಣತನಕ್ಕೆ ಹೊಗಳುವವರು, ನಾವೇ. ಅದಕ್ಕಾಗಿ ಯಾವ ಪತಿಗಿಂತಲೂ ಸಮಾಜ ದೊಡ್ಡದು. ಸಮಾಜ ವೈಜ್ಞಾನಿಕ ವೈಚಾರಿಕವಾಗಿ ನಡೆಯುತ್ತಿರುವುದಕ್ಕೆ ವ್ಯಕ್ತಿ ವ್ಯಕ್ತಿಯ ಭಿನ್ನಾಭಿಪ್ರಾಯಗಳು ಎರಕ ಹೊಯ್ದಾಂತಾಗಿ ಏಕಾಭಿಪ್ರಾಯಬೇಕಾಗುತ್ತದೆ. ಅದಕ್ಕೆ ಒರೆಗಿಟ್ಟ ವಿಮರ್ಶಾತ್ಮಕವಾದ, ವಿಚಕ್ಷಕವಾದ, ಕಾಲಕ್ಕೆ ತಕ್ಕುದಾದ ಬುದ್ಧಿ ಮಾತ್ರ ಬೇಕು.

ನಮ್ಮಲ್ಲಿ ಅಂಥ ಬುದ್ಧಿ, ಜ್ಞಾನ ಇದೆಯೇ ? ಇಲ್ಲ. ಏಕೆಂದರೆ ನಾವು ನಮ್ಮಿಂದ ನಿರ್ಮಾಣವಾದ ದೇವತೆಗಳ 'ಪೂಜೆ' ಮಾಡುತ್ತಿದ್ದೇವೆ. 'ನಮಗೆ' ನಿರ್ಮಾಣ ಮಾಡಿದ ದೇವನ ಪೂಜೆ ಮಾಡುತ್ತಿಲ್ಲ. ಅದಕ್ಕೆ ನಾವು ಅಜ್ಞಾನಿಗಳು. ಗಣಪತಿಗೆ ನಾವೇ ಮಾಡಿದ್ದೇವೆ ಅನ್ನುತ್ತೀರಾ ? ಸರಿ, ದೇವರಿಗೆ ಹುಟ್ಟು ಸಾವುಗಳಿಲ್ಲ, ಬಂಧುಬಳಗವಿಲ್ಲ, ಗುರು ಶಿಷ್ಯರಿಲ್ಲ, ರೂಪ ಆಕಾರಗಳಿಲ್ಲ. ಅದಕ್ಕಾಗಿ ಹುಟ್ಟು, ಸಾವು ಕಂಡ ರಾಮ, ಕೃಷ್ಣ, ಏಸು, ಪೈಗಂಬರ, ಬುದ್ಧ, ಮಹಾವೀರ, ಶಿವ, ಶಂಕರ, ಬಸವ, ಗಾಂಧಿ ಇವರು ದೇವರುಗಳಲ್ಲ. ಇವರಲ್ಲಿ ಕೆಲವರು ಪೌರಾಣಿಕ ಪುರುಷರು, ಕೆಲವರು ಐತಿಹಾಸಿಕ ಪುರುಷರಿಗೆ ನಂಬಲು ಸಾಧ್ಯವಾಗುತ್ತದೆ. ಆದರೆ ಬಾಲವುಳ್ಳ ಹಣಮಂತ, ಸೊಂಡಿಲುವುಳ್ಳ ಗಣಪತಿ, ಮೂರು ಮುಖ, ಆರು ಮುಖ, ದಶಮುಖವುಳ್ಳವರನ್ನು ಜ್ಞಾನಿಗಳು ಒಪ್ಪಲು ಸಾಧ್ಯವಿಲ್ಲ. ಕಪ್ಪೆಗೆ ಹುಟ್ಟಿದವರನ್ನು, ಕಿವಿಯಿಂದ ಹುಟ್ಟಿದವರನ್ನು, ಸೂರ್ಯನಿಂದ, ಗಾಳಿಯಿಂದ ಹುಟ್ಟಿದವರನ್ನು, ಜ್ಞಾನಿಗಳಾದವರು ನಂಬಲಾರರು. ಕಾಣದ ಕೈಯ ಕರ್ತೃತ್ವದಿಂದ, ಪಂಚಭೂತದಿಂದ ನಿರ್ಮಾಣವಾದುದಕ್ಕೆ ಒಪ್ಪುತ್ತೇವೆ. ಸತ್ಯ ಸಚಿತ್ರವಾದುದನ್ನು ಒಪ್ಪುತ್ತೇವೆ. ಮಿಥ್ಯ, ವಿಚಿತ್ರವಾದವುಗಳನ್ನು ಒಪ್ಪುವವರು ಕೋಣದ ಹಾಲು ಕುಡಿದಂತೆಯೇ ಸರಿ.

ಸದ್ಯ ಭಾರತದಲ್ಲಿ ಅನೇಕ ಸಮಾಜದವರು ಅಮೃತದೊಂದಿಗೆ ಕೋಣದ ಹಾಲು ಬೆರೆಸಿ ಕುಡಿಯುತ್ತಿದ್ದಾರೆ. ಇಲ್ಲಿ ಕೆಲವರು ಅನ್ನಬಹುದು, ಕೋಣದ ಹಾಲು ಇರಲು ಸಾಧ್ಯವಿಲ್ಲ. ಅಮೃತದಲ್ಲಿ ಬೆರೆಸುವುದು ಎತ್ತಲಿಂದ ಬಂತು? ನಾನನ್ನುತ್ತೇನೆ. ಅಮೃತವೂ ಇಲ್ಲ, ಕೋಣದ ಹಾಲು ಇಲ್ಲ. ಅಮೃತವೆಂದರೆ ಸತ್ಯವಾದದು. ಅಮರವಾದುದು ಕೋಣದ ಹಾಲು ಅಪ್ಪಟ ಅಸತ್ಯವಾದುದು. ಈಗ ನಮಗೆ ಸತ್ಯ ಬೇಕೋ ಅಸತ್ಯ ಬೇಕೋ ? ಕೆಲವರು ಅನ್ನುತ್ತಾರೆ. ಕೋಣದ ಹಾಲು ಅಮೃತವೆಂದು. ಐತಿಹಾಸಿಕವಾಗಿ, ವೈಚಾರಿಕವಾಗಿ, ವೈಜ್ಞಾನಿಕವಾಗಿ ಒಪ್ಪಬಹುದಾದಂತಹ ಸಮಾಜ ಸುಧಾರಕ ವ್ಯಕ್ತಿಗಳು ಆಕಳ ಹಾಲಿನಂತೆ. ಅವರು ಸೂರ್ಯ ಚಂದ್ರರಿರುವವರೆಗೆ ಇಲ್ಲವೇ ಮಾನವ ಕುಲ ಇರುವವರೆಗೆ ಇರುತ್ತಾರೆ. ಅದು ಅಮೃತಪ್ರಾಯ. ವಿಚಿತ್ರವಾಗಿದ್ದವರು. ಕಾಡಿಸಿ ಪೀಡಿಸಿದವರು, ಹಿಟ್ಲರನಂತವರು, ಲಿಂಕನ್, ಗಾಂಧಿ ಮುಂತಾದವರನ್ನು ಕೊಂದಂತವರು ಕೋಣದ ಹಾಲಿನಂತೆ. ಆ ಹಾಲು ಕುಡಿಯುವವರು ಕಲ್ಪನಾಲೋಕದವರು ಇಲ್ಲವೇ ಭ್ರಮಾಲೋಕದವರು.

ನಮ್ಮ ಭಾರತದವರು ಹತ್ತಾರು ಸತ್ಯ ಸಂಪ್ರದಾಯಗಳೊಂದಿಗೆ ಸತ್ತ ಸಂಪ್ರದಾಯಗಳನ್ನು ಕೂಡ ವಿಜೃಂಭಿಸಿಕೊಂಡು ಬರುತ್ತಿದ್ದಾರೆ. ಇದುವೆ ಅಮೃತದಲ್ಲಿ ಕೋಣನಹಾಲು ಬೆರೆಸಿ ಕುಡಿದಂತೆ ! ಕೋಣದ ಹಾಲು ಇರಲು ಸಾಧ್ಯವಿಲ್ಲವೆಂಬುದು ಗೊತ್ತಿದ್ದರೂ ಆ ಹಾಲಿಗಾಗಿ ತಡಕಾಡುವವರು ಕೋಟಿ ಕೋಟಿ ಜನ !

ನಾನು ಯಾರಿಗೂ ಬಯ್ಯುತ್ತಿಲ್ಲ. ಅಂತರಾತ್ಮದಿಂದ ಓದಿದರೆ ಇಲ್ಲಿ ಬೆಳಕು ಬಿಟ್ಟು ಬೇರೆ ಏನೂ ಇಲ್ಲ.

ಈಗ ನೀವೇ ವಿಚಾರ ಮಾಡಿರಿ-ಬ್ರಿಟಿಷರನ್ನು ನಮ್ಮ ದೇಶದಿಂದ ಬಿಟ್ಟೋಡಿಸಲು ಜನ ಜಾಗೃತಿ ಬೇಕಾಗಿತ್ತು. ಅದಕ್ಕೆ ಲೋಕಮಾನ್ಯ ತಿಲಕರು ಮೂಢ ಭಕ್ತಿಯ ಜನತೆಯ ಆರಾಧ್ಯ ದೇವತಾ ಗಣಪತಿ ಎಂಬುದು ಕಂಡು ಹಿಡಿದು, ಡೊಂಬರಾಟಕ್ಕೆ, ಜಾದೂಗಾರನ ಮಾಟಕ್ಕೆ, ಮರುಳಾಗಿ ಜನ ಜಂಗುಳಿ ನೆರೆಯುವುದನ್ನು ಕಂಡು ಹಿಡಿದು ಗಣಪತಿಯ ವಿಚಿತ್ರ ಆಕಾರಕ್ಕೆ ಮಾರುಹೋಗಿ ಸಾವಿರ ಸಂಖ್ಯೆಯಲ್ಲಿ ಕೂಡುತ್ತಾರೆ. ಅವರ ಕಿವಿಯಲ್ಲಿ ದೇಶಭಕ್ತಿಯ ಮಂತ್ರ ಊದಲು ಸಾಧ್ಯವಾಗುತ್ತದೆ ಎಂದು ಮನಗಂಡು ಧರ್ಮದ ವಿಷಯದಲ್ಲಿ ಬ್ರಿಟಿಷರು ಕೈ ಹಾಕಲಾರರೆಂದು ಈ ಹಬ್ಬವನ್ನು ಸಾರ್ವತ್ರಿಕವಾಗಿ ಆಚರಿಸಲು ಪ್ರೇರೇಪಿಸಿದರು, ಆದರಿಂದ ದೇಶಕ್ಕೆ ಒಳ್ಳೆಯದಾಯಿತು.

ದೇಶ ಸ್ವತಂತ್ರವಾಯಿತು. ಮನುಕುಲಕ್ಕೆ ಹಿತವನ್ನುಂಟು ಮಾಡಿದ ಇತಿಹಾಸ ಪುರುಷರನ್ನು ಗೌರವಿಸುವುದು ನಮ್ಮ ಹಿರಿಯ ಗುಣವಾಗಬೇಕು. ಅಂಥ ವಿಚಾರ ಕಮ್ಮಟಗಳು ನಡೆಯಬೇಕು. ಈಗ ಅಸತ್ಯವಾದ, ನಂಬಲರ್ಹವಾದ ಆಚಾರಗಳು

Digitalized by e-Sahithya Documentation Forum
Sponsored by Sarayu Foundation Trust

ಮಾಡುವುದು, ಮೂಢನಂಬಿಕೆಯ ಪರಮಾವಧಿ. ಒಮ್ಮೆ ಒಬ್ಬ ಒಂದು ಮಂದಿರದಲ್ಲಿ ಗಂಟೆ ಬಾರಿಸಬೇಕಾಗಿತ್ತು. ಗಂಟೆ ಆತನಿಗೆ ನಿಲುಕುತ್ತಿರಲಿಲ್ಲ. ಆತ ಜಿಗಿದು ಜಿಗಿದು ಗಂಟೆ ಬಾರಿಸುವಾಗ ಆತನ ಧೋತರ ಕಚ್ಚೆ ಕಳೆಯಿತು. ಆ ಮಂದಿರದ ಕಡೆಗೆ ಬರುತ್ತಿದ್ದ ಭಕ್ತರನೇಕರು ಈ ದೃಶ್ಯವನ್ನು ಕಂಡು ಈ ದೇವರಿಗೆ ಭಕ್ತಿ ಸಲ್ಲಬೇಕಾದರೆ ಕಚ್ಚೆ ಕಳೆದು ಗಂಟೆ ಬಾರಿಸಬೇಕಾಗುತ್ತದೆ ಎಂದು ಕಚ್ಚೆ ಕಳೆದು ಗಂಟೆ ಬಾರಿಸ ಹತ್ತಿದರು ! ಹಾಗೆ ಸಾರ್ವತ್ರಿಕವಾದ ಗಣಪತಿ ಹಬ್ಬ ಈಗ ಆಚರಿಸುವುದೆಂದರೆ ಆ ಕಚ್ಚೆ ಕಳೆದು ಗಂಟೆ ಹೊಡೆವವರ ಪರಿಸ್ಥಿತಿಯೇ ಆಗಿದೆ. ಹೀಗಾಗಿ ಭಾರತೀಯರು ವಿಚಾರ ಶೂನ್ಯರಾಗಿದ್ದಾರೆ. ಅಥವಾ 'ಗುಂಪು ಗಂಡ'ರಿಗೆ ಈ ಹಬ್ಬ ಅಮಲು ಬರಿಸಿದೆ......ಇಲ್ಲಿ ಆಕಳ ಹಾಲು ಸಿಗುವುದೇ ಇಲ್ಲ.

ಗೊಜ್ಜಿನಲ್ಲಿ ಕುಳಿತ ಎಮ್ಮೆಯ ಮೈಯಿಂದಲೂ ಬರಲಾರದಷ್ಟು ಕೆಸರು ಪಾರ್ವತಿಯ ಮೈಮೇಲೆ ಇರಬೇಕಾದರೆ, ಪಾರ್ವತಿ ಎಷ್ಟು ದಿನ ಸ್ನಾನ ಮಾಡಿರಲಿಕ್ಕಿಲ್ಲ!? ಇದ್ದರೂ ದೇವತೆಯಾದ ಆಕೆ ಗಣಪತಿಯನ್ನು ಮಾಡಿ ಜೀವ ತುಂಬಿ ಬಚ್ಚಲು ಮನೆಯ ದ್ವಾರಪಾಲಕನನ್ನಾಗಿ ಕೂಡಿಸಿದಳು! ಆಕೆ ಸ್ನಾನ ಮಾಡುವಾಗ ಬಚ್ಚಲು ಮನೆಯಲ್ಲಿ ಯಾರೂ ಬರಬಾರದೆಂದು ಕೂಡಿಸಿರಬೇಕಾದರೆ ಆಕೆಯ ಸ್ನಾನ ಎಂಥದ್ದಿರಬೇಕು ? ಅಷ್ಟರಲ್ಲಿ ಶಿವಮಹಾಶಯ ಮನೆಗೆ ಬಂದವನೇ ಬಚ್ಚಲು ಕೋಣೆಯಲ್ಲಿ ನುಗ್ಗುವ ಅವಶ್ಯಕತೆ ಏನಿತ್ತು ? ಗಣಪತಿ ಬಾಗಿಲಿಗೆ ಅಡ್ಡವಾಗಿ ನಿಂತಿತಂತೆ. ಅದರ ಕಿವಿ ಹಿಡಿದು ಶಿವ ಮಹಾಶಯ ಅಂಗಳದಲ್ಲಿ ಬಿಸುಡಿದರೆ ಆಗುತ್ತಿರಲಿಲ್ಲವೇ? ಇಂದಿನ ಕಟುಕನೂ ಕೆಳಗೆ ಮುಖ ಹಾಕುವ ಪರಿಸ್ಥಿತಿ ದೇವನಾಗಿ ಗಣಪನ ಶಿರಚ್ಛೇದನ ಏಕೆ ಮಾಡಿದ ? ಯಾರ ಮಗುವಾದರೂ ಇರಲಿ ಇಂದಿನ ರಾಕ್ಷಸ ಗುಣದವನು ಕೂಡ ಆ ಶಿವನಂತೆ ಶಿರಚ್ಛೇದನದಂತಹ ಕೃತ್ಯ ಮಾಡಲಾರ. ಶಿರಚ್ಛೇದನ ಮಾಡಿ ದೇವನಾದನೆಂದರೆ ಈ ಸಮಾಜಕ್ಕ ಯಾವ ಹಾಲು ಬೇಕು ನೀವೇ ಹೇಳಿ? ಶಿರಚ್ಛೇದನ ಮಾಡಿದಾಕ್ಷಣ ಅದರ ಶಿರ ಸಿಗಲಾರದಷ್ಟು ದೂರ ಹೋಯಿತಂತೆ. ಪಾರ್ವತಿ ಹಟ ಹಿಡಿದಳಂತೆ. ಎಲ್ಲವನ್ನೂ ಬಲ್ಲ ಶಿವ ಕತ್ತರಿಸಿದ ಮುಖವನ್ನೇ ಏಕೆ ತರಲಿಲ್ಲ? ಜೀವ ತುಂಬಿದ ಪಾರ್ವತಿ ಮತ್ತೆ ಜೀವ ಏಕೆ ತುಂಬಲಿಲ್ಲ? ಕಟುಕ ಶಿವಮಹಾಶಯ ದಟ್ಟ ಕಾಡಿನಲ್ಲಿ ಹೊಕ್ಕು ಪಾರ್ವತಿಗೆ ಸಮಾಧಾನ ಪಡಿಸಲು ಒಂದು ದೊಡ್ಡ ಆನೆಯನ್ನೇ ಕೊಂದು ಅದರ ರುಂಡವನ್ನು ತಂದು ಈ ಪಿಂಡಕ್ಕೆ ಕೂಡಿಸಿ ಜೀವ ತುಂಬಿದನಂತೆ. ಇಂಥ ಸುಳ್ಳು ಕಥೆಯನ್ನು ಮುಳ್ಳು ಜನ ತಲೆಯ ಮೇಲೆ ಹೊತ್ತುಕೊಂಡು ಕುಣಿಯುವವರೆಗೆ ನಮಗೆ 'ಆಕಳ ಹಾಲು' ಸಿಗಲಾರದು.

ಓಣಿ ಓಣಿಗಳಲ್ಲಿ ಭಿಕ್ಷೆ ಬೇಡಿ ಗಣಪತಿ ಕೂಡಿಸಿ, ಸೆರೆ ಸೇಂದಿ ಎಂಬ ಅಮೃತ ಕುಡಿಯುತ್ತಾ, ಬೀಡಿ ಸಿಗರೇಟೆಂಬ ಊದು ಬತ್ತಿ ಹೊತ್ತಿಸುತ್ತಾ, ಇಸ್ಪೀಟಾಟವೆಂಬ

ಭಜನೆ ಮಾಡುತ್ತಾ, 'ಒಳಗೆ ಸೇರಿದರೆ ಗುಂಡು' ಎಂಬ ಭಕ್ತಿಗೀತೆಗಳನ್ನು ಹಾಡುತ್ತ ಮಾಡುತ್ತ ಪೂಜೆಯಿಂದ ಅಮೃತ ಹುಟ್ಟುತ್ತದೋ ಹಾಲಾಹಲ ಹುಟ್ಟುತ್ತದೋ ನೀವೇ ಹೇಳಿ. ಬೊಬ್ಬೆ, ಚೀರಾಟ, ಮೆರವಣಿಗೆಗಳಿಂದ ದೇಶದಲ್ಲಿ ಈರ್ಷೆ, ಬಡಿದಾಟವೆಂಬ ಹಾಲ ಹಲವೇ ಹುಟ್ಟುತ್ತದೆ. ಮೆರವಣಿಗೆ ಮಾಡುವುದಾದರೆ ಐತಿಹಾಸಿಕ ವ್ಯಕ್ತಿಗಳ, ಆದರ್ಶ ತತ್ವಗಳ ಮೆರವಣಿಗೆಗಳಾಗಲಿ. ಇದೆಲ್ಲ ಕಾಲವೇ ನಿರ್ಧರಿಸಬೇಕೆಂಬಂತೆ ಆಗಿದೆ. ಇಷ್ಟು ಮಾತ್ರ ನಿಜ. ಇಂಥ ಹಬ್ಬಗಳಿಂದ ದೊಡ್ಡ ಮತ್ತು ಸಣ್ಣ ರಾಜಕಾರಣಿಗಳಿಗೆ ಉಪಯುಕ್ತ. ಅದಕ್ಕೇ ಅವರು ನಮಗೆ ಸ್ವತಂತ್ರ ಭಾರತದ ಬ್ರಿಟೀಷರು!

ಭಾರತದಲ್ಲಿ ಇಂಥ ನೂರಾರು ಹಬ್ಬಗಳು ಇವೆ. ಅವುಗಳಲ್ಲಿ ಕೆಲವು ಮೂಢ ಕಂದಾಚಾರದ ಮುದ್ದೆಗಳಾಗಿವೆ.

ಕೇವಲ ಗಣಪತಿಯ ಚೌತಿ ಎಂಬ ಸಾರ್ವತ್ರಿಕ ಹಬ್ಬವೊಂದರಿಂದಲೇ ಭಾರತದ ಆರು ಲಕ್ಷ ಹಳ್ಳಿ–ಪಟ್ಟಣಗಳಲ್ಲಿ ಆದ ಖರ್ಚಿನ ಅಂದಾಜು ಮಾಡಿದರೆ ಎರಡು ಸಾವಿರ ಕೋಟಿ ರೂ. ಗಳಿಗೂ ಮೀರುತ್ತದೆ! ಇದೇ ಹಣ ಒಳ್ಳೆಯ ಕಾರ್ಯಕ್ಕೆ ವಿನಿಯೋಗಿಸುತ್ತಾ ಬಂದರೆ ನಮ್ಮ ಹಳ್ಳಿ, ಪಟ್ಟಣಗಳಲ್ಲಿ ಸಿಮೆಂಟು ರಸ್ತೆಗಳ ನಿರ್ಮಾಣವಾಗಿರುತ್ತಿತ್ತು. ವಾಚನಾಲಯಗಳ ವ್ಯವಸ್ಥೆ ಇರುತ್ತಿತ್ತು. ಪ್ರಜಾತಂತ್ರ ಉಳಿಯುತ್ತಿತ್ತು. ಈಗ ಸ್ವೇಚ್ಛಾಚಾರ ಮಾತ್ರ ಉಳಿದಿದೆ. ಈ ಮಾತು ಬಡತನ ರೇಖೆಯ ಕೆಳಗಿದ್ದ ಶೇಕಡಾ ಐವತ್ತು ಜನರಿಗೆ ಮತ್ತು ಇನ್ನುಳಿದ ಸಾಮಾನ್ಯ ವರ್ಗದ ಜನ ಅರಿಯಬೇಕಾಗಿದೆ. ಉಳ್ಳವರು, ರಾಜಕಾರಣಿಗಳು ಇಂಥ ಹಬ್ಬಗಳಿಗೆ ಬೇಕೆಂತಲೇ ಮತ್ತಷ್ಟು ಮಹತ್ವ ಕೊಟ್ಟು ತಾವು ಚಕ್ಕಂದವಾಡುತ್ತಿದ್ದಾರೆ. ಅವರದೇನೂ ಹಾಳಾಗಲಾರದು. ಆಗುವುದೆಲ್ಲ ಬಡವನಿಗೇ. ಅದಕ್ಕಾಗಿ ನೂರಕ್ಕೆ ತೊಂಬತ್ತು ಜನ ಈ ಮಾತು ಅರಿತು ರಾಜತಾಂತ್ರಿಕರಿಗೆ ಬುದ್ಧಿ ಕಲಿಸುವ ಆಚರಣೆಗಳು ಬರುವಂತೆ ಪ್ರೇರೇಪಿಸಿ ಸಿಡಿದೇಳಬೇಕು. ಗಣಪತಿ ಹಬ್ಬವನ್ನು ಆಚರಿಸದೆ, ಬೇಕಾದವರು, ವೈದಿಕರು ಅಂದರೆ ಸನಾತನಿಗಳು ತಮ್ಮ ಮನೆಯಲ್ಲಿ ಮಾತ್ರ ಆಚರಿಸಲಿ. ಸಾರ್ವತ್ರಿಕವಾಗಿ ಆಚರಿಸುತ್ತಿರುವುದರಿಂದ ಹೊರಗಿನ ಅರ್ಥಶಾಸ್ತ್ರಜ್ಞರು, ಪಂಡಿತರು ನಗುತ್ತಿದ್ದಾರೆ. ಇಂಥ ಸತ್ತ ಸಂಪ್ರದಾಯದೊಂದಿಗೆ ಪರದೇಶದ ಅನುಕರಣಶೀಲತೆ ಬೆಳೆಸಿಕೊಂಡ ಭಾರತೀಯರು ಎತ್ತ ಸಾಗುತ್ತಿದ್ದಾರೆ ಎಂಬುದಕ್ಕೆ ಉತ್ತರವಿಲ್ಲ !

ಈ ಹಬ್ಬದಿಂದ ದೇಶದ ಕೋಟಿ ಹಣ ನೀರಲ್ಲಿ. ಹತ್ತೆಂಟು ದಿನಗಳು ನೀರಲ್ಲಿ, ಕೊನೆಗೆ ಗಣಪತಿಯೂ ನೀರಲ್ಲಿ !

ಈ ವಿಚಿತ್ರವನ್ನು ಬೇಗ ಅರಿತಷ್ಟು ಭರತ ವರ್ಷಕ್ಕೆ ಹಿತಕರ. ಸತ್ಯ ಸಂಪ್ರದಾಯಗಳನ್ನೇ ಅಳವಡಿಸಿಕೊಳ್ಳುವುದು ಸುಖಕರ.

(ಉತ್ತರ ಕರ್ನಾಟಕ ಪತ್ರಿಕೆ, ಬೀದರ ಕೃಪೆಯಿಂದ)

Digitalized by e-Sahithya Documentation Forum
Sponsored by Sarayu Foundation Trust

"ಪಂಚಾಚಾರ್ಯರು ವೀರಶೈವ ಮತಸ್ಥಾಪಕರಲ್ಲ"

ಮಾನ್ಯರೇ,

ಜಗದ್ಗುರು ಪಂಚಾಚಾರ್ಯರು ಮತಸ್ಥಾಪಕರೆಂದೂ ಬಸವಾದಿ ಶರಣರು ಮತೋದ್ಧಾರಕರೆಂದು ಉಜ್ಜನಿ, ರಂಭಾಪುರಿ, ಶ್ರೀಶೈಲ, ಕಾಶಿ ಮತ್ತು ಕೇದಾರದ ಪಂಚ ಪೀಠಾಧೀಶರು ನೀಡಿರುವ ಹೇಳಿಕೆಯು ದಿನಾಂಕ: 29-6-92ರ ಪ್ರಜಾವಾಣಿ ದಿನ ಪತ್ರಿಕೆಯ 3ನೇ ಪುಟದ 4ನೇ ಕಾಲಂನಲ್ಲಿ ಪ್ರಕಟವಾಗಿದೆ. ಮಾನ್ಯ ಪೀಠಾಧೀಶರುಗಳು ಆಗಿಂದಾಗ್ಗೆ ಇಂತಹ ಹೇಳಿಕೆಗಳನ್ನು ನೀಡಿ ಸಮಾಜವನ್ನು ಅನ್ಯರ ಅವಹೇಳನಕ್ಕೆ ಗುರಿ ಮಾಡುತ್ತಿರುವುದು ಹೇಸಿಗೆಯೂ, ವ್ಯಸನವೂ ಆಗುತ್ತಿದೆ. ಲಿಂಗವಂತ ಧರ್ಮದ ನಿಜವಾದ ಸ್ಥಾಪಕರು ವಿಶ್ವಗುರು ಬಸವಣ್ಣನವರಲ್ಲದೇ ಅನ್ಯರಲ್ಲ. ನಿಜವಾದ ಸ್ಥಾಪಕರ ಬಗ್ಗೆ ಭಿನ್ನ ಭಿನ್ನವಾದ ವಿವಾದ ವಿತಂಡಗಳನ್ನು ಹೂಡಿ ಲಿಂಗವಂತರು ವೀರಾವೇಶದಿಂದ ಹೋರಾಡುತ್ತಿದ್ದಾರೆ. ಕೆಲವರು ಹರಪ್ಪ–ಮಹೆಂಜದಾರೋ ಸಂಸ್ಕೃತಿಗಳ ಕಾಲಕ್ಕೂ, ವೇದ ಆಗಮ ಮಹಾಭಾರತ ರಾಮಾಯಣಗಳ ಕಾಲಕ್ಕೂ ಬಲವಂತದಿಂದ ಎಳೆದೊಯ್ಯುವುದೂ ಉಂಟು. ಲಿಂಗವಂತ ಧರ್ಮವು ಯುಗ ಯುಗಾಂತರಗಳಿಂದಲೂ ಇರುವ ಅನಾದಿ ಧರ್ಮವೆಂದು ಭಾವಾವೇಶದಿಂದ ವಾದಿಸುವವರೂ ಇದ್ದಾರೆ. ಆದರೆ ಇದಕ್ಕೆ ಪ್ರಬಲ ಪ್ರಾಮಾಣಿಕ ಶಾಸ್ತ್ರಾಧಾರಗಳಿಲ್ಲ. ಈ ಧರ್ಮವು 12 ನೇ ಶತಮಾನದಲ್ಲಿ ವಿಶ್ವ ಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟು ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಮಹಾದೇವಿಯಕ್ಕಗಳಂತಹ ಮಹಾನುಭಾವಿಗಳ ಸಾಮೂಹಿಕ ಪ್ರಯತ್ನದಿಂದ ಬಲಗೊಂಡುದು ಅಕ್ಷರಶಃ ಸತ್ಯದ ಸಂಗತಿಯಾಗಿದೆ. ಪರಮ ವಿರಕ್ತರಾದ ತೋಂಟದ ಸಿದ್ಧಲಿಂಗೇಶ್ವರರು ಪರಮ ಗುರು ಬಸವೇಶ್ವರರನ್ನು ಮುಕ್ತ ಕಂಠದಿಂದ ಹದಿಮೂರು ವಚನಗಳಲ್ಲಿ ಮೂವತ್ತ ಮೂರು ಸಲ ಅಪರಿಮಿತ ಧೃಢಭಕ್ತಿಯಿಂದ ಸ್ತುತಿಸಿ ನಮಿಸಿಬಿಟ್ಟಿದ್ದಾರೆ. ಇಂತಹ ಅಗ್ರ ಮರ್ಯಾದೆಯನ್ನು ಮೀರಿದ ಮರ್ಯಾದೆ ಸಮಗ್ರ ಲಿಂಗವಂತ ಧರ್ಮದಲ್ಲಿ ಈವರೆವಿಗೆ ಬಸವಣ್ಣನವರಿಗಲ್ಲದೆ ಬೇರೆ ಯಾರಿಗೂ ಎಲ್ಲಿಯೂ ದೊರೆತಿಲ್ಲ. ಅಂತೆಯೇ ವಚನ ವಾಙ್ಮಯವೊಂದೇ ಲಿಂಗವಂತ ಧರ್ಮದ ಪ್ರಾಮಾಣಿಕ ಮೂಲ ಶಾಸ್ತ್ರವಾಗಿದೆ. ಈ ವಚನಗಳಲ್ಲಿನ ಅಂಶಗಳೂ ಮಾನವತೆಯ ಶ್ರೇಷ್ಟತೆ ಮತ್ತು ಅಭಿವೃದ್ಧಿಗೆ ಕುರಿತಂತೆ ವಿಶ್ವದಲ್ಲಿರುವ ಇತರ ಯಾವುದೇ ಧರ್ಮ ಗ್ರಂಥಗಳಲ್ಲಿ ಉಕ್ತವಾಗಿಲ್ಲವೆಂಬುದು ಸಹ ಸತ್ಯದ ಮಾತಾಗಿದೆ.

ಪರಿಸ್ಥಿತಿ ಹೀಗಿರುವಾಗ ಪಂಚಾಚಾರ್ಯ ಪರಂಪರೆಯವರೆನಿಸಿಕೊಂಡ ಈ

ಐವರು ಪೀಠಾಧಿಕಾರಿಗಳು ತಾವೇ ಗುರುವರ್ಯರು ಬಸವಣ್ಣ ಭಕ್ತನೆಂದು ಹೇಳಿ ವಿಶ್ವಜ್ಯೋತಿಗೆ ಅಪಚಾರಗೈಯ್ಯುವುದು ರೊಚ್ಚಿಗೇಳಿಸುವ ಅಂಶವಾಗಿದೆ. ಈ ಪಂಚಾಚಾರ್ಯ ಪೀಠಗಳೆನಿಸಿಕೊಂಡಿರುವುವು ಬಸವೋತ್ತರ ಕಾಲದ ನಂತರ ಅಂದರೆ 16ನೇ ಶತಮಾನದಲ್ಲಿ ಆಗಿರಬಹುದು. ಪಂಚಾಚಾರ್ಯರುಗಳ ಪೀಠಗಳಲ್ಲಿಯೂ ವ್ಯತ್ಯಯವಿದೆ.

ಸ್ವಯಂಭುವಾಗಮ 9ನೇ ಪಟಲ ವೀರಶೈವ ಸದಾಚಾರ ಸಂಗ್ರಹ ಸಿದ್ಧಾಂತ ಶಿಖಾಮಣಿಗಳ ಪ್ರಕಾರ ಪಂಚಪೀಠಗಳ ಸ್ಥಾಪನೆಯ ಬಗ್ಗೆ ದಾಖಲಾತಿ ಇದೆ. ವೀರಾಗಮದ 8ನೇ ಪಟಲದಲ್ಲಿ ಚತುರಾಚಾರ್ಯರ ದಾಖಲೆ ಮಾತ್ರವಿದೆ. ವಿಶ್ವಾರಾಧ್ಯರ ಹೆಸರಿಲ್ಲ. ಮರುಳಸಿದ್ಧಕೃತ ಗುರುಲಿಂಗ ಜಂಗಮ ಚಾರಿತ್ರವೆಂಬ ಮಹತ್ತರ ಕಾವ್ಯದಲ್ಲಿಯೂ ಸಹ ವಿಶ್ವಾರಾಧ್ಯರ ಉಲ್ಲೇಖವಿಲ್ಲವೆಂದು ತಿಳಿದು ಬಂದಿದೆ. ಬಸವ ಪೂರ್ವದಲ್ಲಿ ವೇದಾಗಮಸಮ್ಮತವಾದ ವೀರಶೈವ ಧರ್ಮವು ಪುರಾಣ ಪ್ರತಿಷ್ಟಿತವಾಗಿತ್ತು ಎನ್ನಲು ಯಾವ ಅನುಕೂಲ ಪ್ರಸ್ತಾಪ ಸಾಕ್ಷಿಗಳೂ ಶಿವತತ್ವಸಾರದಲ್ಲಿ ದೊರಕುತ್ತಿಲ್ಲ. ಪ್ರಶ್ನಿತವಾಗಿರುವ ಪಂಚಪೀಠಗಳು ಅಥವಾ ಚತುರ ಪೀಠಗಳು ಬಸವೋತ್ತರ ಅಂದರೆ ಕ್ರಿಸ್ತ ಶಕ 16ನೇ ಶತಮಾನದ ನಂತರ ಆಗಿರುವ ಅಂದಾಜಿದೆ. ಹಾಗಿದ್ದರೂ ಸಹ ಇವರ ಪರಂಪರೆ 19ನೇ ಶತಮಾನದ ನಂತರ ಕಂಡುಬಂದಿದೆ. ಈ ಪರಂಪರೆಯವರು ಸ್ಥಾವರ ಲಿಂಗದ ಮೂಲವನ್ನು ವರ್ಣಾಶ್ರಮ ಪದ್ಧತಿ, ಜಾತಿ ವಿಭೇಧಕರ ನೀತಿ, ಶೋಷಣೆ, ಅಂಧಶ್ರದ್ಧೆಯ ಯಜ್ಞಾದಿಗಳ ಮೂಲವನ್ನು ಪ್ರತಿಪಾದಿಸುತ್ತಾರೆ. ಇದು ವೀರಶೈವ ಅಥವಾ ಲಿಂಗಾಯತ ಸಿದ್ಧಾಂತಕ್ಕೆ ಸಂಪೂರ್ಣವಾಗಿ ವಿರೋಧವಾದದ್ದು. ಆದ್ದರಿಂದ ಪಂಚಾಚಾರ್ಯರು ಅಥವಾ ಚತುರಾಚಾರ್ಯರು ಖಂಡಿತವಾಗಿಯೂ ಲಿಂಗಾಯತ ಮತಸ್ಥಾಪಕರಲ್ಲ.

ಜಾತ್ಯತೀತ, ವರ್ಣಾತೀತ, ಶೋಷಣೆ ರಹಿತ ದಲಿತರ ಹಿಂದುಳಿದ ಅಲ್ಪಸಂಖ್ಯಾತ ವರ್ಗದ ಧ್ವನಿಯಾದ ಲಿಂಗವಂತ (ವೀರಶೈವ) ಧರ್ಮವು 12ನೇ ಶತಮಾನದಲ್ಲಿ ವಿಶ್ವಜ್ಯೋತಿ, ಶ್ರೀ ಬಸವಣ್ಣನವರಿಂದಲೇ ಸ್ಥಾಪಿತವಾಯಿತು. ಶ್ರೀ ಬಸವಣ್ಣನವರೇ ಇಷ್ಟಲಿಂಗ ಜನಕರು. ಗುರು ವಿರಕ್ತರ ಕಲಹಕ್ಕೂ ಬಸವಾದಿ ಶರಣರಿಗೂ ಯಾವ ಸಂಬಂಧವೂ ಇಲ್ಲ. ಗುರು ವಿರಕ್ತರುಗಳು ತಮ್ಮ ಸ್ವಾರ್ಥ ಪ್ರತಿಷ್ಠೆಗಳಿಗಾಗಿ ಧರ್ಮಗುರು ಬಸವಣ್ಣನವರ ಶೂನ್ಯ ಪೀಠಾಧೀಶ ಅಲ್ಲಮ ಪ್ರಭುಗಳು, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕನಾಗಮ್ಮ, ನೀಲಮ್ಮ ಮುಂತಾದ ಶರಣರುಗಳನ್ನು ಕುರಿತ ಅವಹೇಳನ ನಿಂದೆ ಇತ್ಯಾದಿಗಳನ್ನು ಇನ್ನು ಮುಂದಾದರೂ ನಿಲ್ಲಿಸಲಿ. ಲಿಂಗವಂತ ಭಕ್ತರು ತಮ್ಮ ಆಲಸ್ಯ ಅಜ್ಞಾನ ಮೌಢ್ಯದಿಂದ ಹೊರಬಂದು ಗುಡಿಗೋಪುರ, ಮಠ, ನೀರು, ಸುತ್ತುವುದನ್ನು ಬಿಟ್ಟು ಪಂಚಾಚಾರ, ಷಟಸ್ಥಲ ತತ್ವ ಸಿದ್ಧಾಂತ ದರ್ಶನವನ್ನು ಅರಿಯಬೇಕು. ಇಷ್ಟಲಿಂಗವೇ ನಮ್ಮ ಧರ್ಮಲಾಂಛನ ಅರುಹಿನ ಕುರುಹು ದೇವರಾಗಿರು

Digitalized by e-Sahithya Documentation Forum
Sponsored by Sarayû Foundation Trust

ವುದರಿಂದ ಸ್ಥಾವರ ಲಿಂಗದಲ್ಲಿ ಉದ್ಭವಿಸಿ ಬಂದಿರುವವರಾಗಲೀ ಅಥವಾ ಸ್ಥಾವರಲಿಂಗ-ದೇವರುಗಳ ಪ್ರತಿಷ್ಟೆ ಮಾಡುವವರಾಗಲೀ, ಗುಡಿ, ಗುಡಾರ ದೇವಾಲಯಗಳ ಪೂಜಾರಿ ಪುರೋಹಿತ ವ್ಯವಸ್ಥೆಯಾಗಲಿ ಲಿಂಗಾಯತರಿಗೆ ಸಂಪೂರ್ಣವಾಗಿ ಸಂಬಂಧವಿಲ್ಲವೆಂದು ಒತ್ತಿ ಹೇಳಬೇಕಾಗಿದೆ.

ಶತ ಶತಮಾನಗಳ ಧಾರ್ಮಿಕ–ಮೌಢ್ಯದಿಂದ ಹೊರಬಂದು ಇಷ್ಟ ಲಿಂಗಧಾರಿಗಳು ಬಸವಾದಿ ಶರಣರ ವಚನಗಳನ್ನು ಸರಿಯಾಗಿ ಓದಿ–ಅರಿತು ಅನುಭವಕ್ಕೆ ತಂದುಕೊಂಡು ಆಚರಣೆಗಿಳಿಯಬೇಕು. ಗುರು-ವಿರಕ್ತರ ಸ್ಥಾನಮಾನದ ಕಲಹವನ್ನು ಉದಾಸೀನ ಮಾಡುವುದೊಂದೇ ಬಸವ ಭಕ್ತರ ಮುಂದಿರುವ ಏಕೈಕ ಪರಮ ಗುರಿಯಾಗಿದೆ ಎಂದು ಈ ಮೂಲಕ ಸಮಾಜದ ಎಲ್ಲ ಜನತೆಯಲ್ಲೂ ಕಳಕಳಿಯಿಂದ ಮನವಿ ಮಾಡಿದ್ದೇನೆ.

ತಮ್ಮ ವಿಶ್ವಾಸಿ,

ಸ್ಥಳ : ಚಾಮರಾಜನಗರ
ದಿನಾಂಕ : 1-7-92

ಸು. ಸದಾಶಿವಪ
ಅಧೀಕ್ಷಕರು,
ರೇಷ್ಮೆ ಇಲಾಖೆ, ಚಾಮರಾಜನಗರ.

'ಬಸವ ಕಿರಣ'
ಪಾಕ್ಷಿಕ ಪತ್ರಿಕೆಗೆ ಚಂದಾದಾರರಾಗಿರಿ.

ಶಿವಮೊಗ್ಗ ರಾಷ್ಟ್ರೀಯ ಬಸವ ದಳದ ಶರಣ ಡಿ. ಎಸ್. ವಿಜಯಕುಮಾರ್ ಸಂಪಾದಕತ್ವದಲ್ಲಿ ಹೊರಡುತ್ತಿರುವ **'ಬಸವ ಕಿರಣ'** ಪಾಕ್ಷಿಕ ಪತ್ರಿಕೆಯು ರಾಷ್ಟ್ರೀಯ ಬಸವ ದಳಗಳ ಕಾರ್ಯಕ್ರಮದ ವಿವರವನ್ನು ಹೊತ್ತು ಬರುತ್ತದೆ. ಕಲ್ಯಾಣ ಕಿರಣವು ಲೇಖನಗಳಿಗೆ ಹೆಚ್ಚಿನ ಸ್ಥಾನ ನೀಡುವುದರಿಂದ ರಾಷ್ಟ್ರೀಯ ಬಸವ ದಳಗಳ ಸುದ್ದಿ ವಿವರಗಳನ್ನು ಕೊಡಲು ಅದಕ್ಕೆ ಸಾಧ್ಯವಾಗದು. ಈ ಕೊರತೆ ತುಂಬಲೋಸುಗ ಹುಟ್ಟಿರುವ "ಬಸವ–ಕಿರಣ" ಕ್ಕೆ ಕಲ್ಯಾಣ ಕಿರಣದ ಓದುಗರು ಚಂದಾದಾರರಾಗಬೇಕು.

ವಾರ್ಷಿಕ ಚಂದಾ : 25 ರೂ. ಆಜೀವ ಸದಸ್ಯತ್ವ : 250 ರೂ.

ವಿಳಾಸ : **ಶರಣ ಡಿ. ಎಸ್. ವಿಜಯಕುಮಾರ್,** ಸಂಪಾದಕರು
ಬಸವ ಕಿರಣ ಕಾರ್ಯಾಲಯ, ಬಸವ ಸಾಗರ ಪ್ರಿಂಟರ್ಸ್
ಉಷಾದೇವಿ ಕಾಂಪ್ಲೆಕ್ಸ್, ಪಾರ್ಕ್ ಬಡಾವಣೆ
ದುರ್ಗಿ ಗುಡಿ, 4 ನೇ ತಿರುವು
ಶಿವಮೊಗ್ಗ - 577201.

ಸಮಸ್ಯೆ ? -- ಸಮಾಧಾನ !

ಪೂಜ್ಯ ಮಾತಾಜಿಯವರೇ,

ಬಸವ ಕಲ್ಯಾಣ ತಾಲ್ಲೋಕಿನ ಗೋರಟಾ ಎಂಬ ಊರಿನವರು ನಾವು ಮೇ 8 ಮತ್ತು 9 ರಂದು ನಮ್ಮ ಊರಿಗೆ ಪಂಚಪೀಠಾಧೀಶರಲ್ಲಿ ಇಬ್ಬರು ರಂಭಾಪುರಿ ಮತ್ತು ಕಾಶಿಯ ಶ್ರೀಗಳು ಬಂದಿದ್ದರು. ಅವರು ತಮ್ಮ ಭಾಷಣದಲ್ಲಿ 'ಬಸವಣ್ಣ (ಮತ್ತು ಇತರ ಶರಣರ)ನ ವಚನಗಳು ಶಾಸ್ತ್ರವಾಗಲಾರವು. ಅವು ಕೇವಲ ಸಮಾಜ ಸುಧಾರಣೆಯ ಅಂಶಗಳು. ಅಲ್ಲದೆ ಬಸವಣ್ಣ ಒಬ್ಬ ಭಕ್ತ, ಅವನು ಗುರುವು ಆಗಲಿಕ್ಕೆ ಯೋಗ್ಯನಲ್ಲ.' ಎಂದರು. ತಕ್ಷಣವೇ ಸಭೆಯಲ್ಲಿದ್ದ ಜನ ಪ್ರತಿಭಟಿಸುತ್ತಲೇ ಗೊಂದಲ ಉಂಟಾಯಿತು. "ಬಸವಣ್ಣನವರು ಅದು ಹೇಗೆ ಗುರುವಲ್ಲ ? ಇದನ್ನು ಸಿದ್ಧಪಡಿಸಿರಿ" ಎಂದು ಜನರು ಪಟ್ಟು ಹಿಡಿಯುತ್ತಲೇ ಉಭಯ ಶ್ರೀಗಳು ಉತ್ತರಿಸದೆ ಅವಸರದಿಂದ ಹೋಗಿಬಿಟ್ಟರು. ಅಂದಿನಿಂದ ನಮ್ಮ ಊರಲ್ಲಿ ಕಲುಷಿತ ವಾತಾವರಣ ಉಂಟಾಗಿದೆ. ಲಿಂಗಾಯತ ಸಮಾಜದಲ್ಲಿ ಎರಡು ಗುಂಪಾಗಿದೆ. ಈ ಬಗ್ಗೆ ತಮ್ಮ ಅಭಿಪ್ರಾಯ, ಪರಿಹಾರವೇನು ?

—ಗುರುನಾಥಪ್ಪ ಹತ್ತೆ, ಗೋರಟಾ (ಬಿ) 585327, ತಾ-ಬಸವ ಕಲ್ಯಾಣ

ಗೂಬೆ ಸೂರ್ಯನನ್ನು ನಿಂದಿಸಿದರೆ, ರೋಗಿ ಹಾಲನ್ನು ಬೈದರೆ ಅವುಗಳ ಮಹತ್ವವೇನೂ ಕಡಿಮೆಯಾಗದು. ಬಸವಣ್ಣನವರು ಸಾಮಾನ್ಯ ಗುರುವಲ್ಲ ಜಗದ್ಗುರು, ವಿಶ್ವಗುರು ಎನ್ನಿಸಿಕೊಂಡಿರುವರು, 'ಶ್ರೀಗುರು ಬಸವ ಲಿಂಗಾಯ ನಮಃ' ಮಂತ್ರ ಎಂದಿನಿಂದಲೂ ಮನೆ ಮನೆ, ಮನ ಮನಗಳಲ್ಲಿ ತೊಳಗಿ ಬೆಳಗುತ್ತಲಿದೆ.

ಅದಕ್ಕೇ ನಾವು ಹೇಳುವುದು ಇಂದು ಧ್ರುವೀಕರಣ ಅಗತ್ಯ. ಸ್ಪಷ್ಟವಾದ ವಿಚಾರದ ಗಡಿಯನ್ನು ಗುರುತಿಸಿಕೊಂಡು ಈ ಗಲಾಟೆ ತಪ್ಪಿಸ ಬೇಕು ಎಂದು. ಪಂಚಾಚಾರ್ಯವಾದಿಗಳ 19 ನೇ ಶತಮಾನದ ಅಂತ್ಯದಲ್ಲಿ 20 ಶತಮಾನದ ಆದಿಯಲ್ಲಿ ಲಿಂಗೋದ್ಭವ ಲೀಲೆ ಸೃಷ್ಟಿಸಿ ವೈದಿಕಾಚರಣೆಗಳನ್ನು ಸಮಾಜದಲ್ಲಿ ತುರುಕಿದ ಮೇಲೆ ಈ ಸಮಾಜ ಹಾವು ಹೊಕ್ಕ ಮನೆಯಾಗಿದೆ. ಹಾವುಗಳು ಹೊರಗಿದ್ದಾಗ ಭಯವಿರದೆ, ಒಳಹೊಕ್ಕಾಗ ಹೇಗೆ ಯಾರಿಗೂ ಶಾಂತಿ ಇರದೋ ಹಾಗೆ ಇವರು ಹೋದಲ್ಲೆಲ್ಲ ವಚನ ಸಾಹಿತ್ಯ ಸೌರಭದ ವಾತಾವರಣ ಕೆಡಿಸಿ, ಮೂಢ ಕಲ್ಪನೆಯ ದುರ್ಗಂಧ ಹರಡುತ್ತಾರೆ. ಧರ್ಮಗುರು ಬಸವಣ್ಣ- ಧರ್ಮಶಾಸ್ತ್ರ ವಚನ ಸಾಹಿತ್ಯ ಎರಡು ದೃಢವಿಶ್ವಾಸದೊಡನೆ ನಂಬುವವರು ಲಿಂಗವಂತರು; ಉಳಿದವರು ತಮ್ಮನ್ನು ತಾವು ಏನಾದರೂ ಕರೆದುಕೊಳ್ಳಲಿ. ಇನ್ನವರು, ಧರ್ಮಪಿತ ಬಸವಣ್ಣನವರ ಹೆಸರು ಸಹಿತ ಬಾಯಲ್ಲಿ ಆಡದಂತೆ ಸ್ಪಷ್ಟಪಡಿಸುವುದೊಳ್ಳೆಯದು .

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಪರಮ ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ.

ಬಿ. ಎನ್. ಸೋಲಾಪುರೆ
ಶಾಂತಿ ವರ್ಧಕ ಪದವಿ ಪೂರ್ವ
ಕಾಲೇಜು, ಕಮಲನಗರ-585417
ಜಿ॥ ಬೀದರ.
ದಿ॥ 2-8-1992

ತಮ್ಮ ಪಾದಾರವಿಂದಗಳಲ್ಲಿ ಪೊಡಮಡುತ್ತ ಇದನ್ನು ಬರೆಯುತ್ತಿದ್ದೇನೆ. ವಿಶ್ವ ಗುರು ಬಸವಣ್ಣ ಬೆಳ್ಳಂಬೆಳಗು ಜಗದಗಲ, ಮುಗಿಲಗಲ, ಮಿಗೆಯಗಲವಾಗಿ ಕಾಣು-ತ್ತಾನೆ. ಗೂಗೆಗಳಿಗೆ ಆ ಬೆಳಕು ಕಾಣಲು ಆಗದು. ಅವಕ್ಕೆ ಕತ್ತಲು ಬೇಕು. ಬಸವ ಪೂರ್ವದ ಕತ್ತಲಲ್ಲಿ ಏನೇನು ನಡೆದಿಲ್ಲ? ಅದನ್ನೇ ಸರಿ ಎನ್ನುವ ಪುರೋಹಿತ ಶಾಹಿ ಹಿತಾಸಕ್ತಿಗಳು ಇನ್ನೂ ಮಣ್ಣು ಗೂಡಿಲ್ಲವಲ್ಲ! ಇದೆಲ್ಲ ಅವರ ಅಪ್ಪಟ ಸ್ವಾರ್ಥಕ್ಕಾಗಿ ಢೋಂಗಿ ನಿದ್ರೆಯಾಗಿದೆ. ಬಸವಣ್ಣ ಅವರ ಎದೆಯ ಮೆಟ್ಟಿ ಎಚ್ಚರಿಸಲಿಲ್ಲವೆ? ಎಚ್ಚ-ರಿಸಿದರೂ, ಜಂಗಮರ ಜಂಗಮ ಬಸವಣ್ಣ ಎಂಬುದು ಮನಗಂಡರೂ ವಂಶ ಪಾರಂಪ ರ್ಯದವರು ತೋರಗೊಡದೆ ತಮ್ಮ ಕೀಳುತನವನ್ನು; ಹುಚ್ಚು ದೊಡ್ಡಸ್ತಿಕೆಯನ್ನು ಮೆರೆಯಲೆತ್ನಿಸುತ್ತಿದ್ದಾರೆ. ಪ್ರಜಾತಂತ್ರದಲ್ಲಿ ವಿಚಕ್ಷಕ ಬುದ್ಧಿಯ ಜನಾಂಗ ಬಸವನ ಮಹತ್ ಕಾಣಿಕೆ ಸಾರ್ವಜನಿಕ ಅಭಿಪ್ರಾಯವಾಗಿಸಿದೆ ಎಂಬುದು ಬೇಗ ಅರಿಯದವರು ಅರಿತು ಒಲವು ತೋರಬೇಕು. ಇಲ್ಲವಾದರೆ ತಾವು ಸೂಚಿಸಿದಂತೆ ಹೊಗಳುವುದು ತೆಗಳುವುದು ಎರಡನ್ನೂ ಮಾಡದೆ ಬಸವಣ್ಣನನ್ನು ಬಿಟ್ಟು ಹೊರಗುಳಿಯಬೇಕು.

ಕಲ್ಯಾಣ ಕಿರಣ, ಬಸವ ಬೆಳಗು, ಶಾಂತಿ ಕಿರಣ ಮುಂತಾದ ಪತ್ರಿಕೆಗಳು, ವಚನ ಸಾಹಿತ್ಯ ಅಮೃತವನ್ನು ಎತ್ತಿ ಕುಡಿಸುತ್ತಿವೆ. ಎಲ್ಲೆಲ್ಲೋ ತಮ್ಮದನ್ನು ಸಾಧಿಸ ಹೊರಟು ಪುರೋಹಿತಶಾಹಿ ಜನ ಮುಗ್ಗರಿಸುವುದು ಸಾಕಾಗದೆ ಕೆದುಕುತ್ತಲೇ ಇರುವ ಪಿಶಾಚಿ ಪ್ರವೃತ್ತಿಯಿಂದಲೇ ಕುಣಿ ಸೇರುವ ಇವರಿಂದ ಏನೂ ಒಳ್ಳೆಯದನ್ನು ಸಾಧಿಸಲು ಸಾಧ್ಯವಿಲ್ಲ. ವೃಥಾ ಹಾಳಾಗುತ್ತಿದ್ದಾರೆ ಎಂಬುದೊಂದೆ ಬಸವಾನುಯಾಯಿಗಳ ಮನ ಮರುಗುತ್ತಿದೆ.

ಅಕ್ಕನ, ಅಣ್ಣನ ಜೀವನ ವಚನಗಳಲ್ಲಿ ನೋಡಹೊರಟರೆ ಮೈಮನ ಪುಳಕಿತ ಗೊಂಡು ಆನಂದದ ಹನಿಸುರಿಸುತ್ತವೆ ಕಣ್ಣುಗಳು. ಇಂಥ ಭಾಗ್ಯವನ್ನು ಕೊಟ್ಟವರು ತಾವು ಹಾಗೂ ಪೂಜ್ಯಶ್ರೀ ಶ್ರೀನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿ ಗಳು,ಅಲ್ಲದೆ ಭಾಲ್ಕಿ ಹಿರೇಮಠದ ಅಪ್ಪಗಳು, ಇಲಕಲ್ಲ ಶ್ರೀ ಮಹಾಂತಪ್ಪಗಳು ಇನ್ನೂ ಸಾವಿರ ಸಂಖ್ಯೆಯಲ್ಲಿರುವರು. ಎಲ್ಲಕ್ಕಿಂತ ತಮ್ಮ ಹಾಗೂ ಮಹಾಸ್ವಾಮಿಗಳವರ ಸೇವೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಅಲ್ಲದೆ ರಾಜ್ಯದ ಹೊರಗೆ, ರಾಷ್ಟ್ರದ ಹೊರಗೆ ಬಸವ ಬೆಳಗು ಅಂತರಾತ್ಮದಲ್ಲಿ ಇಳಿಸಿದ, ಇಳಿಸುತ್ತಿರುವ ಗೌರವ ತಮಗೆ ಮೊದಲು ಸಲ್ಲುತ್ತದೆ. ಏನೋ ಬರೆಯಲೆತ್ನಿಸಿ ಪೂರ್ತಿಯಾಗದೆ ಉಳಿದ ಇದನ್ನು ತಮ್ಮ ಪಾದಾರವಿಂದಗಳಲ್ಲಿ ಇಡುತ್ತ ನಮಿಸುವ,

ತಮ್ಮ ಕಿಂಕರ,
(ಸಹಿ/-)

ಇಷ್ಟಲಿಂಗಾರ್ಚನಾ ಗೀತೆಗಳು

ರಚನೆ : —ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ತಾತ್ತ್ವಿಕವಾದ ಹಿನ್ನೆಲೆಯೊಡನೆ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಮಾಡುವುದಕ್ಕಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನೂತನ ಕೃತಿ "ಇಷ್ಟಲಿಂಗಾ-ರ್ಚನಾ" ಎಂಬುದನ್ನು ರಚಿಸಿದ್ದು ಅದನ್ನೀಗ ಕೊಡಲಾಗಿದೆ. ವಿಭೂತಿ, ರುದ್ರಾಕ್ಷಿ ಧಾರಣೆಯ ನಂತರ ಈ ಕ್ರಮವು ಪ್ರಾರಂಭವಾಗುತ್ತದೆ. ಪೂರ್ವ ಭಾಗವು 'ದೇವ ಪೂಜಾ ವಿಧಾನ'ದಲ್ಲಿರುವಂತೆ.

ಸೃಷ್ಟಿಕರ್ತನ ಸ್ಮರಣೆ :

ಈ ಮಹತ್ ಸೃಷ್ಟಿಯನು ರಚಿಸಿಹ ಮಹದೇವ
ನೀ ಮಹಾದಾತನು ಜಗದಾದಿ ಮೂಲ
ಪ್ರೇಮನಿಧಿ, ಸರ್ವಜ್ಞ, ಸರ್ವಶಕ್ತನೆ ನಿನಗೆ
ನೇಮದಲಿ ಪ್ರಥಮತಃ ಶರಣು ಸಲ್ಲಿಸುವೆ ॥೧॥

ಧರ್ಮಗುರು ಸ್ಮರಣೆ :

ಧರ್ಮಪಿತ ಬಸವ ಗುರು ಕರ್ಮ ಹರ ಶ್ರೀ ಗುರು
ಮರ್ಮವನು ತಿಳಿಸಿ ಈ ನರಜನ್ಮದಾ
ಧರ್ಮ ಪಥವನು ತೋರಿ ಎಮ್ಮನುದ್ಧರಿಸಿದ
ಧರ್ಮಗುರು ಬಸವಂಗೆ ಶರಣು ಸಲ್ಲಿಸುವೆ ॥೨॥

ದೀಕ್ಷಾ ಗುರು ಸ್ಮರಣೆ :

ಕರ್ಮವಂ ಪರಿಹರಿಸಿ ಧರ್ಮ ಮಾರ್ಗದಿ ನಡೆಸಿ
ಕೂರ್ಮೆಯಿಂ ಎಮಗಿತ್ತು ದೀಕ್ಷ ಸಂಪದವ
ಧರ್ಮ ರಕ್ಷೆಯ ಹೊದಿಸಿ ಅಷ್ಟ ಆವರಣದ
ಮರ್ಮವರುಹಿದ ಗುರುವೆ ಶರಣು ಸಲ್ಲಿಸುವೆ ॥೩॥

ಶರಣರ ಸ್ಮರಣೆ :

ಆದಿಗುರು ಬಸವಣ್ಣ ಕರುಣೆಯಿಂದೆಮಗಿತ್ತ
ಸ್ವಾದದ ಲಿಂಗವಂತ ಘನ ಧರ್ಮವ
ಮೋದದಿಂ ಆಳವಡಿಸಿ ಶಿವಯೋಗ ಮರ್ಮವನು
ವೇಧಿಸಿದ ಶರಣರಿಗೆ ಶರಣು ಸಲ್ಲಿಸುವೆ ॥೪॥

Digitalized by e-Sahithya Documentation Forum
Sponsored by Sarayu Foundation Trust

ಪೂಜಾ ಸಂಕಲ್ಪ :

ಪಂಚ ಭೂತಾತ್ಮಕ ಪ್ರಪಂಚವನು ಇತ್ತುದಕೆ
ಪಂಚವಿಂಶತಿಯ ಘನ ಪಿಂಡಾಂಡವ
ಋಣಭಾರ ಸಲ್ಲಿಸಿ ಧನ್ಯತೆಯ ಹೊಂದಲು ॥೫॥
ಮನತುಂಬಿ ಅರ್ಚನೆಯ ನಾ ಮಾಡುವೆ

ಅರ್ಚಿಸುವ ವಸ್ತುವಿನ ಸಾರೂಪ್ಯ ಹೊಂದಲು
ಉರಿಯುಂಡ ಕರ್ಪೂರದಂತೆ ತಾ ಬೆರೆಯಲು
ಸಲ್ಲಿಸುವ ಪರಿಕರಕೆ ಸಮನಾದ ಸದ್ಗುಣವ ॥೬॥
ಚೆಲ್ವಿನಿಂ ಹೊಂದಲು ನಾ ಪೂಜಿಪೆ

ಕರಕಮಲದಲ್ಲಿ ಇಷ್ಟಲಿಂಗ ದೇವನನ್ನು ಇರಿಸಿಕೊಳ್ಳುವುದು :

ವಿಶ್ವಚೇತನ ಪ್ರಭುವೆ ಸರ್ವಶಕ್ತ ವಿಭುವೆ
ಬಸವ ಗುರು ದಯದಿಂದ ಆಕಾರ ತಾಳ್ದು
ಶಾಶ್ವತದಿ ಮಮಕಾಯ ಮನ ಭಾವದಲ್ಲಿರುವ ॥೭॥
ಇಷ್ಟಲಿಂಗವೆ ನಿನ್ನ ಕರಕೆ ಸ್ವಾಗತಿಪೆ

ಇಷ್ಟಲಿಂಗಕ್ಕೆ ಶರಣು :

ಕರಕಮಲ ಪೀಠದಲಿ ಕರದಿಷ್ಟಲಿಂಗವನು
ಪರಮ ರತಿಯಿಂದಿರಿಸಿ ಭರದಿ ದಿಟ್ಟಿಸುತ
ಪರಬ್ರಹ್ಮ ಚೇತನವೆ ಚುಳುಕಾಗಿ ಬಂದಿರಲು ॥೮॥
ಪರಮ ಹರುಷದಿ ಶರಣು ನಾ ಸಲಿಸುವೆ

ಜಲ ಶುದ್ಧಿ :

ಬಸವ ಬಸವಾ ಎಂದು ಮಜ್ಜನಕ್ಕೆರೆಯದನ
ಹುಸಿಯಾದ ಭಕ್ತಿಯದು ಗುರಿ ಮುಟ್ಟದೆಂದು
ಬಸವ ಮಂತ್ರವ ಸ್ಮರಿಸಿ ಐದು ಅಂಗುಲಿಗಳಿಂ ॥೯॥
ಕುಶಲದಿ ಬೆರಳದ್ದಿ ಜಲ ಶುದ್ಧಿಗೈವೆ

ಬಸವಂ ಪ್ರಣವಾಕಾರಂ
ಬಸವಂ ಶರಣಾಗತ ರಕ್ಷಕ ವರಲೋಲಂ
ಬಸವಂ ಜನ್ಮಕುಠಾರಂ
ಬಸವಂ ನಮಾಮಿ ಶ್ರೀ ಗುರು ಬಸವೇಶಂ ॥೧೦॥
(ಇದನ್ನು ಹೇಳುತ್ತಾ ಜಲ ಶುದ್ಧಿ ಮಾಡಬೇಕು)

ಇಷ್ಟಲಿಂಗಕ್ಕೆ ಮಜ್ಜನ :

ನೀನು ಕೊಟ್ಟಿಹ ಜಲಕೆ ಎನ್ನ ಭಕ್ತಿಯ ಬೆರಸಿ
ಚಿನ್ಮಯನೆ ನಾನೀಗ ಮಜ್ಜನಕ್ಕೆರೆವೆ
ಎನ್ನ ಅಂತಃಕರಣ ಕಾರುಣ್ಯ ರಸವನು
ಸಾನೆಲ್ಲ ಜೀವರ ಲೇಸ ಬಯಸಿ ನಿನಗೆರೆಯುವೆ ॥೧೧॥

ತೇವವನ್ನು ಒರೆಸುವುದು :

ಒಳಗೆ ತುಂಬಿರುವಂಥ ಮೋಹ ಮಮಕಾರಗಳ
ಜಲ ಬಿಂದುಗಳನೆಲ್ಲ ಒರೆಸುವಂತೆ
ಮಡಿಯಾದ ಅರಿವೆಯಿಂ ನೀರ ಕಣಗಳನೆಲ್ಲ
ಸಡಗರದಿ ಒರೆಸುವೆನು ಲಿಂಗ ದೇವ ॥೧೨॥

ಪಂಚಕೋನ ರಚನೆ :

ಪಂಚ ಭೂತಾತ್ಮಕ ಬ್ರಹ್ಮಾಂಡಕಾಧಾರ
ಪಂಚಾಕ್ಷರೀ ಪ್ರಣವ ಪ್ರತ್ಯಕ್ಷ ರೂಪ
ಶಾಂಭವೀ ಮುದ್ರೆಯ ಪ್ರತಿರೂಪ ತಾನಾದ
ಶುಭ ಪಂಚ ಕೋನವ ಅಂಗೈಲಿ ಬರೆವೆ ॥೧೩॥

ಲಿಂಗಕ್ಕೆ ವಿಭೂತಿ ಧಾರಣೆ :

ಆರು ಅರಿಗಳೆ ಆದ ಕಾಮ ಮೋಹಾದಿಗಳ
ಆರು ಬೆರಣೆಗಳುರುಹಿ ಅರಿವಿನಗ್ನಿಯಲಿ
ಪ್ರಣವದ ಸಂಕೇತ ಮೂರು ಎಳೆ ಭಸಿತವ
ಕರದಿಷ್ಟ ಲಿಂಗದ ಮಸ್ತಕದಿ ಧರಿಪೆ ॥೧೪॥

ರುದ್ರಾಕ್ಷಿ ಧಾರಣೆ :

ಚಿನ್ಮಯನೆ ನಿನ್ನಿರವು ಘನವಾದ ನಿನ್ನರಿವು
ಎನ್ನ ದೃಷ್ಟಿಗೆ ತಾನು ಚೆನ್ನಾಗಿ ನಿಲುಕಲಿ
ಅಂಥ ಸಮ್ಯಕ್‌ನೋಟ ಪ್ರಾಪ್ತಿಯಾಗಲಿ ಎಂದು
ಪ್ರಾರ್ಥಿಸುತ ರುದ್ರಾಕ್ಷಿ ಮಾಲೆಯನ್ನಿಡುವೆ ॥೧೫॥

ಗಂಧ ಧಾರಣೆ :

ಎನ್ನಂತರಂಗವು ಹೊಯ್ದಾಟ-ಉದ್ವೇಗ
ಚೆನ್ನಾಗಿ ಕಳಕೊಂಡು ನಿಶ್ಚಿಂತಗೊಳಲಿ
ಕರುಣಿ ಮಂಗಲ ರೂಪಿ ಪರಶಿವನೆ ನಿನಗೀಗ
ಪರಮ ಶಾಂತಿಯ ಗಂಧ ನಾ ತೀಡುವೆ ॥೧೬॥

Digitalized by e-Sahithya Documentation Forum
Sponsored by Sarayu Foundation Trust

ಅಕ್ಷತೆ ಧಾರಣೆ :

ಕರ್ಮಕಧ್ಯಕ್ಷನಾಗಿರುವ ಚಿನ್ಮಯ ಮೂರ್ತಿ! ತ್ರೈ
ಕರ್ಮ ಸಂಚಿತ–ಪ್ರಾರಬ್ಧ–ಆಗಾಮಿ
ಕರ್ಮ ತ್ರಯಗಳನೆಲ್ಲ ಇನ್ನು ಪರಿಹರಿಸಲಿಕೆ
ಪೆರ್ಮೆಯಿಂ ಅಕ್ಷತೆಯ ನಾ ಸಲಿಸುವೆ ॥೧೭॥

ಬಿಲ್ವಧಾರಣೆ :

ಸದ್ಭಕ್ತಿ ಸುಜ್ಞಾನ ಸತ್ಕ್ರಿಯೆಗಳೆಂಬುವ
ಮೂರ್ದಳದ ಬಿಲ್ವದ ಪತ್ರೆಯನು ತಂದು
ಮೂರು ಮಲಗಳು ಅಳಿದು ಮೂಲಿಂಗವಳವಡಲಿ
ಹಾರೈಸಿ ತ್ರಿದಳದ ಬಿಲ್ವವನ್ನೇರಿಸುವೆ ॥೧೮॥

ಪುಷ್ಪ ಧಾರಣೆ :

ಸದಮಲಂತಃಕರಣ ಭಕ್ತಿಯ ಬನದಲ್ಲಿ
ಸದುಭಾವ ಸೌರಭವ ಬೀರುತ್ತಲರಳಿರುವ
ಸದುಗುಣದ ಕುಸುಮಗಳ ಪ್ರೇಮದಿಂದಲಿ ಈಗ
ಚಿದ್ರೂಪಿ ಲಿಂಗಕ್ಕೆ ನಾ ಸೂಡುವೆ ॥೧೯॥

ಧೂಪಾರ್ಪಣೆ :

ಜೀವವು ಬದುಕಲು ಪ್ರಾಣವಾಯುವ ಕೊಟ್ಟ
ಕಾವ ದೇವನಿಗೆಂತು ಋಣವ ಸಲ್ಲಿಸಲಿ ?
ದೇವನು ಇತ್ತಿರುವ ವಾಯುವಿಗೆ ಧೂಪದ
ಸುವಾಸಿತ ಧೂಮವ ಬೆರಸಿ ಸಲ್ಲಿಸುವೆ ॥೨೦॥

ದುರ್ವಿಚಾರದ ಭಾವ ನೆಲೆ ನಿಲ್ಲದಿರಲಿ
ಸುವಿಮಲ ಹೃದಯದಿ ಚದುರನು ನೆಲೆಸಲಿ
ಎಂಬ ಹಂಬಲ ತುಂಬಿ ಶರಣ ಸತಿಯಾಗೀಗ
ತುಂಬು ಹೃದಯದಿ ಧೂಪ ನಾ ನೀಡುವೆ ॥೨೧॥

ಆರತಿಯು ಅರ್ಪಣೆ :

ಲೋಕವು ಬದುಕಲು ರವಿ, ಚಂದ್ರ, ಅನಲನ
ಜೋಕೆಯಿಂ ಒಲಿದಿತ್ತ ಪರಮ ದೇವನಿಗೆ
ಬೆಳಕನಿತ್ತುದಕಾಗಿ ಆರತಿಯ ಬೆಳಗುತ್ತ
ಪುಳಕಿತ ಭಾವದಿಂ ಆನಂದಿಪೆ ॥೨೨॥

ಎನ್ನ ಮತಿ ಮನದೊಳಿಹ ಅಜ್ಞಾನ ಕತ್ತಲೆಯ
ಚಿನ್ಮಯನ ಅರಿವಿನಿಂ ಹೆರೆ ತೊಲಗಿಸಿ
ಎನ್ನ ಅರಿವಿನ ಕಣ್ಣು ಚೆನ್ನಾಗಿ ಅರಳಲೆಂ
ದುನ್ನತದ ಆಸೆಯಿಂ ನಾ ಬೆಳಗುವೆ ॥೨೩॥

ನೈವೇದ್ಯ

ಅಂದಂದಿನಾಹಾರ ತಂದೆಯಂದದಿ ನೀಡಿ
ಎಂದೆಂದು ಎಮ್ಮಗಳ ಸಲಹುತ್ತಲಿರುವ
ಇಂಬೀವ ಜಗದೊಡೆಯ ನಿನ್ನ ನಾನರ್ಪಿಸುವೆ
ನೆಂಬ ಶರಣಾಗತಿಯಿಂ ನೈವೇದ್ಯವಿಡುವೆ ॥೨೪॥

ಅರ್ಘ್ಯವಣೆ :

ಶರೀರ ಮನ ಧನವೆಂಬ ಮೂರು ಸಂಪದವನ್ನು
ಗುರು, ಲಿಂಗ, ಜಂಗಮಕೆ ಸಲ್ಲಿಸುವೆನೆನುತ
ಮೂರು ಸಲ ನಾನೀಗ ಅರ್ಘ್ಯವಣೆಯನು ಹಾಕಿ
ಮೂರು ವಿಧ ದಾಸೋಹ ಭಾವದಲಿ ನಿಲುವೆ ॥೨೫॥

ಗಂಟಾನಾದ :

ಸೃಷ್ಟಿಯ ಮುಕುಟದೊಲು ಮನುಜನ ಹುಟ್ಟಿಸಿ
ಶ್ರೇಷ್ಟವಹ ಮಾತಿನ ಇಂಚರವ ನೀಡಿ
ಮಾನವನ ಘನತೆಯ ಏರಿಸಿದ ಋಣಕಾಗಿ
ಪ್ರಣವನಾದದ ಗಂಟೆ ನಾ ತಾಡಿಪೆ ॥೨೬॥

ಶರಣು ಸಲ್ಲಿಸುವಿಕೆ :

ನನ್ನೆಲ್ಲು ಅಲೆಸದೆ ಅಳಲಿಸದೆ ಬಳಲಿಸದೆ
ನೀನಾಗಿ ಬಂದೆನ್ನ ಅಂಗದಲಿ ನೆಲೆಸಿ
ಹಿಂದಿನ ಜನ್ಮದಾ ಸುಕೃತವೋ ಎಂಬಂತೆ
ಚೆಂದದಿಂ ಪೂಜೆಯನು ಕೊಂಡುದಕೆ ಶರಣಾರ್ಥಿ ॥೨೭॥

(ಇಲ್ಲಿಂದ ಮುಂದೆ ಎರಡನೆ ಭಾಗವಾದ ಸ್ತವನ)

Digitalized by e-Sahithya Documentation Forum
Sponsored by Sarayu Foundation Trust

ವೀಡಿಯೋ ಕೆಸೆಟ್ಟುಗಳ ನಿರ್ಮಾಣಕ್ಕೆ ಧನ ಸಹಾಯ ಗೈದವರು

ಆರನೆಯ ಶರಣ ಮೇಳದ ಸಮಯದಲ್ಲಿ ಬಿಡುಗಡೆಯಾಗಲಿರುವ ಇಷ್ಟಲಿಂಗಾರ್ಚನಾ ಎಂಬ ವೀಡಿಯೋ ಕೆಸೆಟ್ಟಿಗೆ, ಮತ್ತು "ಕ್ರಾಂತಿಯೋಗಿ ಬಸವಣ್ಣ" ಎಂಬ ಚಲನಚಿತ್ರದ ವೀಡಿಯೋ ಕೆಸೆಟ್ಟಿಗೆ (ಸುಧಾರಿಸಿದ ಧ್ವನಿಯೊಡನೆ) ಹಲವಾರು ಶರಣ ಬಂಧುಗಳು ಧನ ಸಹಾಯ ಮಾಡಿದ್ದು ಅವರ ಹೆಸರು ಇಂತಿವೆ. ಯೂಮ್ಯಾಟಿಕ್ ಫಿಲ್ಮಿನಲ್ಲಿ ಸಿದ್ಧವಾಗುತ್ತಿರುವ ಕೆಸೆಟ್ಟಿಗೆ 1100 (ಹನ್ನೊಂದು ನೂರು) ರೂ.ದಂತೆ ಸ್ವೀಕರಿಸಲಾಗುತ್ತಿದ್ದು, ದಾನಿಗಳ ಹೆಸರನ್ನು ಕೆಸೆಟ್ಟಿನಲ್ಲಿ ಕಾಣಿಸುತ್ತಿದ್ದು, ದಾನಿಗಳಿಗೆ 1 ಪ್ರತಿಯನ್ನು ಉಚಿತವಾಗಿ ಕೊಡಲಾಗುವುದು.

ಅಂದಾಜು ವೆಚ್ಚ ಕ್ರಾಂತಿಯೋಗಿ ಬಸವಣ್ಣಕ್ಕೆ 30,000 (ಮೂವತ್ತು ಸಾವಿರ), ಇಷ್ಟಲಿಂಗಾರ್ಚನಾಕ್ಕೆ 35 ರಿಂದ 40 ಸಾವಿರ.

ದೃಶ್ಯ—ಶ್ರಾವ್ಯ ಸುರುಳಿ [ವೀಡಿಯೋ ಕೆಸೆಟ್ಟಿಗೆ] 1100 ರಂತೆ ಧನ ಸಹಾಯ ಗೈದವರು

ಶರಣರುಗಳಾದ :

೧. ಗಿರಿಜಮ್ಮ ಮತ್ತು ಸುಬ್ಬಣ್ಣ ಮೈಸೂರು, ಧಾರವಾಡ
೨. ಲೀಲಾದೇವಿ ಮತ್ತು ಡಿ. ಬಿ. ಕೊಳ್ಳಿ, ಬೈಲಹೊಂಗಲ
೩. ಅಡಿವೆಪ್ಪ ತಂಬಾಕೆ, ತಾಳಮಡಗಿ
೪. ಕಲ್ಲಿನಾಥ ಚನ್ನಪ್ಪ ಕೊಂಡಗುಳಿ, ಹುಬ್ಬಳ್ಳಿ
೫. ಶಶಿಕಲಾ ಮತ್ತು ರಾಜಶೇಖರ ಮಡಕಿ, ಸೊಲ್ಲಾಪುರ
೬. ಬಿ. ಎಸ್. ರುದ್ರಪ್ಪ ಬಿದರೆ, ಶಿವಮೊಗ್ಗ
೭. ಶಕುಂತಲಾ ಮತ್ತು ಪುಟ್ಟಸಿದ್ಧಪ್ಪ, ಬೆಂಗಳೂರು (ಎರಡೂ ಕೆಸೆಟ್ಟಿಗೆ ಸೇರಿ 2200-00)
೮. ಸಾಹುಕಾರ ಸಣ್ಣವೀರಣ್ಣ ಮಟಮಾರಿ
೯. ಪಾರ್ವತಮ್ಮ ಮತ್ತು ಅಪ್ಪಾರಾವ ಖಟ್ಟೆ. ಸೊಲ್ಲಾಪುರ
೧೦. ವಿಜಯಾ ಮತ್ತು ನಂಜುಂಡಪ್ಪ, ದಾವಣಗೆರೆ
೧೧. ನಿರ್ಮಲಾ ಮತ್ತು ಜಯದೇವ, ಬೆಂಗಳೂರು,
೧೨. ಶಂಕರಪ್ಪ ಪಾಟೀಲ, ಕುಸನೂರು, ಆಂಧ್ರ

ಇವರೆಲ್ಲರಿಗೆ ಶುಭಹಾರೈಕೆಗಳು. ಸ್ವಯಂ ಪ್ರೇರಣೆಯಿಂದ ಕೊಡುವ ದಾನಿಗಳಿಗೆ ಅವಕಾಶ ಉಂಟು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವೈಸ್ ಚೇರ್ಮನ್, ವಿಶ್ವಕಲ್ಯಾಣ ಮಿಷನ್, ಬೆಂಗಳೂರು

ಸಮೃದ್ಧಿ, ಸಂತೃಪ್ತಿ ಸಂತಸದ ಮೂಲ

ಉತ್ತಮ ಆರೋಗ್ಯ. ಶಿಕ್ಷಣ, ಲಾಭದಾಯಕ ಉದ್ಯೋಗ....ಇವು ಕರ್ನಾಟಕ ಸರ್ಕಾರವು ಜನತೆಯ ನೆಮ್ಮದಿಯ ಜೀವನಕ್ಕಾಗಿ ಕೈಗೊಂಡಿರುವ ವಿನೂತನ ಪ್ರಗತಿ ಪರ ಕಾರ್ಯಕ್ರಮಗಳು. ಜನತೆಯ ಅಗತ್ಯ ಮತ್ತು ಆಶೋತ್ತರಗಳ ಪೂರೈಕೆಗಾಗಿ ಸರ್ಕಾರವು ಈ ಕಾರ್ಯಕ್ರಮಗಳನ್ನು ಮುಂದುವರಿಸಿದೆ.

ಮಹಾತ್ಮಾ ಗಾಂಧೀಜಿಯವರ ಸ್ವಯಂ ಪೂರ್ಣ ಗ್ರಾಮರಾಜ್ಯದ ಕನಸನ್ನು ನನಸಾಗಿಸಲು 1991ರ ಅಕ್ಟೋಬರ್-2 ರಂದು 'ವಿಶ್ವ' ಎಂಬ ವಿನೂತನ ಕಾರ್ಯಕ್ರಮ ಅನುಷ್ಠಾನಗೊಂಡಿದೆ. ಗ್ರಾಮೀಣ ಗುಡಿಕೈಗಾರಿಕೆಗಳಿಗೆ ಉತ್ತೇಜನ ನೀಡಿ, ನಿರಂತರ ಉತ್ಪನ್ನಕಾರಕ ಉದ್ಯೋಗ ಸೃಷ್ಟಿಸಿ, ಗ್ರಾಮೀಣ ಅಭಿವೃದ್ಧಿಗೆ ನೆರವಾಗುವುದು ಈ ಯೋಜನೆಯ ಗುರಿ. ಈಗ ಈ ಯೋಜನೆಯನ್ನು ನಗರ ಪ್ರದೇಶದ ಬಡ ಜನರಿಗೂ ವಿಸ್ತರಿಸಲಾಗಿದೆ.

ಶಿಕ್ಷಣ,ಪಡೆದ ಸಮಾಜವ ಮಾತ್ರ ಪ್ರಗತಿಪಥದಲ್ಲಿ ಸಾಗಬಲ್ಲದು. ಇದನ್ನರಿತ ಸರ್ಕಾರ, ಶಿಕ್ಷಣದ ಪ್ರಗತಿಗಾಗಿ 'ಅಕ್ಷಯ' ಎಂಬ ವಿಶೇಷ ಕಾರ್ಯಕ್ರಮವನ್ನು ಕೈಗೊಂಡಿದೆ. ಈ ಕಾರ್ಯಕ್ರಮದಂತೆ ಶಾಲೆಗಳಲ್ಲಿ ಓದುವ 1 ರಿಂದ 4ನೇ ತರಗತಿಯ ಹಿಂದುಳಿದ ವರ್ಗದ ಕುಟುಂಬಗಳ ಮಕ್ಕಳಿಗೆ, ಶಾಲೆಗೆ ಹಾಜರಾಗುವ ಪ್ರತಿಯೊಂದು ದಿನಕ್ಕೆ ಒಂದು ರೂಪಾಯಿ ಹಣದ ಉತ್ತೇಜನ ಧನ ನೀಡಲಾಗುತ್ತದೆ. ಈ ಯೋಜನೆಯು ಮಧ್ಯದಲ್ಲಿ ಮಕ್ಕಳು ಶಾಲೆ ತೊರೆಯುವ ಪ್ರಮಾಣವನ್ನು ತಗ್ಗಿಸುತ್ತದೆ. ಅಲ್ಲದೆ, ಬಾಲ ಕಾರ್ಮಿಕರ ಸಮಸ್ಯೆಯನ್ನು ಸಹ ನಿವಾರಿಸಲು ನೆರವಾಗುತ್ತದೆ. 1992ರ ಜೂನ್ ತಿಂಗಳಿನಿಂದ 1992ರ ಸೆಪ್ಟೆಂಬರ್ ತಿಂಗಳವರೆಗೆ ಶಾಲೆಗೆ ಕ್ರಮವಾಗಿ ಹಾಜರಾದ ರಾಜ್ಯದ ಮಕ್ಕಳಿಗೆ ಇಂದು ಈ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ಜನತೆಯ ಮತ್ತೊಂದು ಪ್ರಾಥಮಿಕ ಅಗತ್ಯ-ವಸತಿ. ಈ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರವು ವಿಶೇಷ ಗಮನ ನೀಡಿದೆ. 'ಆಶ್ರಯ' ಯೋಜನೆಯಡಿ ಸರ್ಕಾರವು ರಾಜ್ಯದಾದ್ಯಂತ ನಿವೇಶನ ರಹಿತ ಆರು ಲಕ್ಷಕ್ಕೂ ಹೆಚ್ಚು ಜನರಿಗೆ ನಿವೇಶನಗಳನ್ನು ವಿತರಿಸಿದೆ ಮತ್ತು ಮನೆಗಳ ನಿರ್ಮಾಣವನ್ನು ಕೈಗೊಂಡಿದೆ. ಇಂದು ರಾಜ್ಯದ 175 ತಾಲ್ಲೂಕಿನಲ್ಲೂ ಪ್ರತಿ ತಾಲ್ಲೂಕಿನ ಒಂದು ಸಾವಿರ ಜನರು ಹಕ್ಕು ಪತ್ರ ಪಡೆಯುತ್ತಾರೆ.

ಕೃಷಿ ಕಾರ್ಮಿಕರ ಕ್ಷೇಮಕ್ಕಾಗಿ ಸರ್ಕಾರ ಕೈಗೊಂಡಿರುವ 'ಶ್ರಮ ಕಲ್ಯಾಣ ನಿಧಿ' ಇಂದು ಉದ್ಘಾಟನೆಯಾಗುತ್ತದೆ. ಇದಕ್ಕಾಗಿ 1992-93ರಲ್ಲಿ ಹದಿನೈದು ಕೋಟಿ

Digitalized by e-Sahithya Documentation Forum
Sponsored by Sarayu Foundation Trust

ರೂಪಾಯಿ ಒದಗಿಸಲಾಗಿದೆ. ದುರ್ಬಲ ವರ್ಗದವರ ಕ್ಷೇಮಾಭ್ಯುದಯಕ್ಕಾಗಿ ಸರ್ಕಾರ ಇನ್ನೂ ಹಲವು ಹತ್ತು ಪ್ರಗತಿಪರ ಕಾರ್ಯಕ್ರಮಗಳನ್ನು ಕೈಗೊಂಡಿದೆ.

* 'ಶುಶ್ರೂಷಾ' ಕಾರ್ಯಕ್ರಮದಂತೆ ಗ್ರಾಮೀಣ ಜನತೆಗೆ ವರ್ಷಕ್ಕೆ ಎರಡು ಸಲ ಉಚಿತ ಆರೋಗ್ಯ ತಪಾಸಣಾ ಸೌಲಭ್ಯವನ್ನು ಆರೋಗ್ಯ ಕೇಂದ್ರಗಳ ಮೂಲಕ ಕಲ್ಪಿಸಲಾಗಿದೆ.

* ಅಸಂಘಟಿತ ಕಾರ್ಮಿಕರಿಗೆ ಸಮೂಹ ವಿಮಾ ಸೌಲಭ್ಯ ಒದಗಿಸುವ 'ಬೀದಿಭಾಗ್ಯ' ಅವರ ಬದುಕಿಗೆ ಭರವಸೆಯ ಬೆಳಕು ನೀಡಿ ಸಾಮಾಜಿಕ ಭದ್ರತೆ ಒದಗಿಸಿದೆ.

* ಹಿಂದುಳಿದ ವರ್ಗಗಳ ಜನರು ವಾಸಿಸುವ ಪ್ರದೇಶದಲ್ಲಿನ ದೇವಸ್ಥಾನಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಗುರಿ ಹೊಂದಿರುವ 'ಆರಾಧನಾ' ಕಾರ್ಯಕ್ರಮವು ಅನುಷ್ಠಾನಗೊಳ್ಳುತ್ತಿದೆ.

* ರೈತರು ತಮ್ಮ ಜಮೀನುಗಳಲ್ಲಿ ವೈಜ್ಞಾನಿಕ ಕೃಷಿಪದ್ಧತಿ ಕೈಗೊಳ್ಳಲು ಮಣ್ಣು ಪರೀಕ್ಷೆಗೆ ನೆರವಾಗುವ 'ಭೂಗುಣ' ಕಾರ್ಯಕ್ರಮ.

* ಯುವಜನರ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಪ್ರತಿಭಾವಂತ ಕ್ರೀಡಾಪಟುಗಳಿಗೆ 'ಏಕಲವ್ಯ ಪ್ರಶಸ್ತಿ' ನೀಡಲಾಗುತ್ತಿದೆ. 10,000 ರೂ. ನಗದು ಬಹುಮಾನ, ಕಂಚಿನ ಪ್ರತಿಮೆ ಮತ್ತು ಪ್ರಶಸ್ತಿ ಪತ್ರ ಈ ಪ್ರಶಸ್ತಿಯಲ್ಲಿ ಸೇರಿವೆ.

ಬಡವರು ಮತ್ತು ದಲಿತರ ಮುನ್ನಡೆಗಾಗಿ ರಾಜ್ಯ ಸರ್ಕಾರ ಈಗಾಗಲೇ ಹಲವಾರು ಸವಲತ್ತು, ಸೌಕರ್ಯಗಳನ್ನು ಕಲ್ಪಿಸಿದೆ. ಈ ದಿಶೆಯಲ್ಲಿ ಅದು ಇನ್ನೂ ಹೆಚ್ಚಿನ ಸೇವೆಗೆ ಸನ್ನದ್ಧವಾಗಿದೆ.

ಮಹಾತ್ಮಾ ಗಾಂಧೀಜಿಯವರ ಜನ್ಮದಿನದಂದು ಜನತೆಯ ಸೇವೆಗಾಗಿ ಸರ್ಕಾರದ ಮರು ಸಂಕಲ್ಪ. ಅವರ ಮುಗುಳ್ನಗೆ ಮಾಸದಿರಲು ಮತ್ತಷ್ಟು ಕಾರ್ಯ ಕ್ರಮಗಳ ಅನುಷ್ಠಾನ.

ಜನಮನಕ್ಕೆ ಸ್ಪಂದಿಸುವ ಸರ್ಕಾರ

—ಕರ್ನಾಟಕ ವಾರ್ತೆ

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಕ್ರಾಂತಿಯೋಗಿ ಬಸವಣ್ಣ ಚಲನ ಚಿತ್ರ ಕುರಿತು ಅಭಿಪ್ರಾಯಕ್ಕಾಗಿ—

ಶರಣ ಬಂಧುಗಳೇ,

"ಕ್ರಾಂತಿಯೋಗಿ ಬಸವಣ್ಣ" ಚಲನಚಿತ್ರವನ್ನು ತಾವು ನೋಡಿರಬಹುದು. ಅದನ್ನು ಕೆಸೆಟ್ಟು ರೂಪದಲ್ಲಿ ಪರಿವರ್ತಿಸಲು ಉದ್ದೇಶಿಸಿದ್ದೇವೆ. 35 ಎಂ. ಎಂ. ದಿಂದ ಯೂ ಮ್ಯಾಟಿಕ್‌ಗೆ ಪರಿವರ್ತಿಸಿ, ನಂತರ ಕೆಸೆಟ್ ಮಾಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ದಾನಿಗಳಿಂದ ನೆರವನ್ನೂ ಸಹ ಕೋರಲಾಗಿದೆ.

ಚಲನಚಿತ್ರದಲ್ಲಿ ಎರಡು ನೃತ್ಯಗೀತೆಗಳಿವೆ. 1. "ನೀನೆನಗೊಲಿಯೋ ದೊರೆಯೆ ಸಿರಿಯೆ" ಇದು ಕಲ್ಪನಾ ಗೀತೆ (Imagination song) ಸಂಗಮದಲ್ಲಿ ಅಭ್ಯಸಿಸುತ್ತಿದ್ದ ವಟು ಬಸವಣ್ಣನವರನ್ನು ಕಂಡು ಸೋದರ ಸೊಸೆಯರಾದ ಗಂಗಾಂಬಿಕೆ-ನೀಲಾಂಬಿಕೆಯರು ತಮ್ಮದೇ ಆದ ರೀತಿಯಲ್ಲಿ ಕಲ್ಪಿಸಿಕೊಳ್ಳುವರು. ಇದರಲ್ಲಿ ಬಸವಣ್ಣನವರು ಯಾವ ರೀತಿಯಲ್ಲೂ ಭಾಗವಹಿಸಿಲ್ಲ. ಹುಡುಗಿಯರು ಕಲ್ಪನಾ ಲೋಕದಲ್ಲಿ ಭಾವಿಸುವ ಬಗೆ ಇದೆ.

2. "ಜನುಮ ಜನುಮಾಂತರದ ಪುಣ್ಯವು" ಎಂಬುದರಲ್ಲಿ ನೀಲಾಂಬಿಕೆ ಕಲ್ಪನೆ ಮಾಡುವ ಬಗೆ ಇದೆ. ಬಸವಣ್ಣನವರು ತನ್ನೆದುರಿಗೆ ಅಲಂಕೃತಳಾಗಿ ಬಂದ ಪತ್ನಿಯಲ್ಲಿ ಆಸಕ್ತಿ ತೋರದೆ ಬರವಣಿಗೆಯಲ್ಲಿ ನಿರತರಾದಾಗ ಆಕೆ ಖಿನ್ನಳಾಗುತ್ತಾಳೆ. ಬಹುಶ: ಮೊದಲ ಪತ್ನಿ ಗಂಗಾಂಬಿಕೆಯ ಸಂಗಡ ಬಹಳ ಅನ್ಯೋನ್ಯವಾಗಿರುವ ಕಾರಣ ತನ್ನಲ್ಲಿ ಆಸಕ್ತಿ ಇಲ್ಲ ಎಂದು ಭಾವಿಸುತ್ತಾಳೆ. ಆ ಅನ್ಯೋನ್ಯತೆಯನ್ನು ಕಲ್ಪಿಸಿಕೊಳ್ಳುತ್ತಾಳೆ. ಮತ್ತು ಆ ಹಾಡು ಆದರ್ಶ ಗೃಹಸ್ಥ ಜೀವನದ ಪರಿಕಲ್ಪನೆ ನೀಡುವ ಅರ್ಥ ಒಳಗೊಂಡಿದೆ.

ಕೆಲವರು ಈ ಹಾಡು-ನೃತ್ಯಗಳಿಂದ ಧರ್ಮಗುರು ಬಸವಣ್ಣನವರ ವ್ಯಕ್ತಿತ್ವಕ್ಕೆ ಚ್ಯುತಿ ಬರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಎರಡೂ ಸಹ ಕಾಲ್ಪನಿಕ ನೃತ್ಯಗೀತೆಗಳು-ಅದರಲ್ಲಿಯೂ ಗಂಗಾಂಬಿಕೆ-ನೀಲಾಂಬಿಕೆಯರ ಅಂತರಂಗದಲ್ಲಿ ಬಂದಂತಹ ಭಾವನೆ. ಆದರೂ ಚಲನಚಿತ್ರದ ತಾಂತ್ರಿಕತೆ ತಿಳಿಯದವರು ಈ ಆಕ್ಷೇಪಣೆ ಮಾಡುತ್ತಾರೆ. ಮತ್ತೆ ಕೆಲವರಂತೂ ನಾವು ಎಷ್ಟು ಒಳ್ಳೆಯದನ್ನು ಮಾಡಿಕೊಟ್ಟರೂ ದ್ವೇಷಿಸಲು, ಟೀಕಿಸಲು ಹಕ್ಕುದಾರಿಕೆ ಪಡೆದವರಂತೆ ವರ್ತಿಸುತ್ತಾರೆ. ಆದ್ದರಿಂದ ಓದುಗರಾದ ಶರಣ ಬಂಧುಗಳು ಕೆಸೆಟ್ಟಾಗಿ ಪರಿವರ್ತನೆಗೊಳ್ಳಲಿರುವ ಈ ಚಿತ್ರದಲ್ಲಿ ಮೇಲೆ ಸೂಚಿಸಿದ 2 ನೃತ್ಯಗೀತೆಗಳು ಇರಲೋ ಬೇಡವೋ ಎಂಬ ಬಗ್ಗೆ ಬೇಗನೆ ಅಭಿಪ್ರಾಯ ತಿಳಿಸಬೇಕು. ವಿಳಂಬ ಮಾಡದೆ ಪತ್ರ ಬರೆಯಬೇಕು. ನಿಮ್ಮ ಅಭಿಪ್ರಾಯ ತಿಳಿದರೆ ನಿರ್ಧರಿಸಲು ನಮಗೆ ಅನುಕೂಲವಾಗುತ್ತದೆ. ಚಲನಚಿತ್ರ ಮಾಡುವಾಗ ವಿಶ್ವಗುರು ಬಸವಣ್ಣನವರಿಗೆ ಇಬ್ಬರು ಹೆಂಡತಿಯರು ಎಂಬ ಕಲ್ಪನೆ ಇತ್ತು. ಈಗ, ಇದ್ದುದು ಒಬ್ಬಳೇ ಹೆಂಡತಿ ಎಂಬುದು ಖಚಿತವೆನಿಸಿದೆ. ಆದರೆ ಆ ವಿಷಯದಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ಒಂದು ಪಾತ್ರ ತೆಗೆದರೆ ಅದಕ್ಕೆ ಸಂಬಂಧಿಸಿದ ಮುಖ್ಯ ಪ್ರಸಂಗಗಳನ್ನು ಕೈಬಿಡಬೇಕಾಗುತ್ತದೆ. ಆದ್ದರಿಂದ ಆ ಬಗ್ಗೆ ನಿಮ್ಮ ಸಲಹೆ ಕೊಟ್ಟರೂ ಪ್ರಯೋಜನವಾಗದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಬಸವ ಮಂಟಪ

2035, ಎರಡನೆಯ ಬ್ಲಾಕು, ಕಾರ್ಡ್ ರಸ್ತೆ, 20ನೇ ಮೆಯಿನ್

ರಾಜಾಜಿನಗರ, ಬೆಂಗಳೂರು-560001

Digitalized by e-Sahithya Documentation Forum
Sponsored by Sarayu Foundation Trust

ಅಗಲಿದ ಮೂವರು ಗಣ್ಯರಿಗೆ ಶ್ರದ್ಧಾಂಜಲಿ.

೧. ಕಲಾಕಂಠೀರವ ಕರಿಬಸಯ್ಯನವರು.

ಶರಣ. ಕರಿಬಸಯ್ಯನವರು ಕಲಾ ಕಂಠೀರವ ಎಂಬ ಬಿರುದು ಹೊಂದಿ ಕಲಾರಂಗದಲ್ಲಿ ಅಗಾಧ ಸೇವೆ ಮಾಡಿ, ಕಲಾವಿದರಿಗೆ ಪ್ರೀತಿಯ ಅಪ್ಪಾಜಿ ಆಗಿದ್ದವರು. ಬಸವ ತತ್ತ್ವ ಪ್ರಚಾರದಲ್ಲಿ ಯಂತೂ ಅವರ ಆಸಕ್ತಿ, ಉತ್ಸಾಹ, ಹುಮ್ಮಸ್ಸು ಹೇಳಲಸದಳ 'ಬಸವಾ' ಎಂಬ ಮೂರ ಕ್ಷರ ಕೇಳುತ್ತಲೇ ಅವರಿಗೆ ವಯಸ್ಸು ಮರೆಯುತ್ತಿತ್ತು, ತಾರುಣ್ಯ ಮಾನಸಿಕವಾಗಿ ಮರುಕ ಳಿಸುತ್ತಿತ್ತು. ಬಸವ ತತ್ತ್ವಟ್ರಸ್ ಮೂಲಕ ವಿನೂತನ ಯೋಜನೆ ಹಮ್ಮಿಕೊಂಡ ಶರಣ ಕರಿಬಸಯ್ಯನವರು. ದಿ. 12-3-92 ರಂದು ಲಿಂಗೈಕ್ಯರಾಗಿ ಇಳೆಯನ್ನಗಲಿದರು. ಸಮಾಜವು ಅವರನ್ನು ಕಳೆದುಕೊಂಡು ಬಡವಾಯಿತು. ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಯನ್ನು ಕೋರುವೆವು.

೨. ಶರಣ. ಜಿ. ಸಾಂಬಶಿವಯ್ಯನವರು.

ಶರಣ. ಜಿ. ಸಾಂಬಶಿವಯ್ಯನವರು ದಿನಾಂಕ 7-7-1992 ರಂದು ಲಿಂಗೈಕ್ಯರಾದರು. ಹಿಂದಿನ ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದ ಇವರು ಎಚ್. ಇ. ಸಿ. ಪಿ. ಯಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದರು. ಎಂ. ಎಸ್. ಇ. ಬಿ. ಯಲ್ಲೂ ಅವರು ಮುಖ್ಯ ಇಂಜಿನಿಯರ್ ಆಗಿ ಸಾಕಷ್ಟು ಪ್ರಗತಿಪರವಾದ ಯೋಜನೆಗಳನ್ನು ಕಾರ್ಯಗತ ಮಾಡಿದರು. ಇವರ ಕಾರ್ಯದಕ್ಷತೆಯನ್ನು ಗಮನಿಸಿ ಇವರನ್ನು ಎಂ. ಎಸ್. ಇ. ಬಿ. ಯ ಅಧ್ಯಕ್ಷರನ್ನಾಗಿ ಸರ್ಕಾರದವರು ಆರಿಸಿದರು. ಲಿಂಗಾಯತ ಸಮಾಜ ದಲ್ಲೂ ಬಹುಮಟ್ಟಿನ ಸೇವೆ ಸಲ್ಲಿಸಿ. ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆಯ ಅಧ್ಯಕ್ಷರಾಗಿ ಸುಮಾರು 10 ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದರು.

೩. ಶರಣ. ಐ. ಎಂ. ಮುಗದುಮ್ ಅವರು

ಐ. ಎಂ. ಮುಗದುಮ್‌ರವರು ದಿನಾಂಕ 9-10-1992 ರಂದು ಲಿಂಗೈಕ್ಯರಾದರು. ಕರ್ನಾಟಕ ರಾಜ್ಯದ ಮುಖ್ಯ ಇಂಜಿನಿಯರ್ (ನೀರಾವರಿ), ಬಿ. ಡಬ್ಲ್ಯು. ಎಸ್. ಎಸ್. ಬಿ. ಛೇರ್‌ಮನ್ ಹಾಗೂ ಇಂಜಿನಿಯರ್ ಇನ್ ಚೀಫ್ ಅಂಡ್ ಸ್ಪೆಷಲ್ ಸೆಕ್ರೆಟರಿ, ಕರ್ನಾಟಕ ಸರ್ಕಾರ ಈ ಹುದ್ದೆಗಳಲ್ಲಿದ್ದು ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಕೂಡಲ ಸಂಗಮ, ಅಳಿವು-ಉಳಿವಿನ ಬಗ್ಗೆಯ ಮುದ್ನಾಳ ಕಮಿಟಿಯ ಸದಸ್ಯರಾಗಿದ್ದರು. ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಅದಕ್ಕೆ ಜೀವಂತಿಕೆಯನ್ನು ತಂದುಕೊಟ್ಟಿದ್ದರು. ಕೂಡಲ ಸಂಗಮದಲ್ಲಿ ಬಸವ ಧರ್ಮಪೀಠ ನಿರ್ಮಾಣಕ್ಕೆ ಪ್ರೇರಣೆ ನೀಡಿ, ಮೊಟ್ಟಮೊದಲ ಕೊಡುಗೆ 5000 ರೂಗಳನ್ನು ಜಮೀನಿನ ಖರೀದಿಗೆ ದೇಣಿಗೆಯಾಗಿ ನೀಡಿದ್ದರು.

ಈ ಮೂವರು ಮಹನೀಯರ ನಿಧನ ಧರ್ಮ-ಸಮಾಜಗಳಿಗೆ ತುಂಬಿ ಬಾರದ ಹಾನಿ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕಲ್ಯಾಣ ಕಿರಣವು ಕೋರುತ್ತದೆ,

Digitalized by e-Sahithya Documentation Forum
Sponsored by Sarayu Foundation Trust